₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 03.03.2025 ಸಂಪುಟ: 10 ಸಂಚಿಕೆ: 48 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮೂರನೇ ಬಾರಿ ರಣಜಿ ಗೆದ್ದ ವಿದರ್ಭ



ಚಿತ್ರ: ಸುಧಾಕರ್ ದೇವರಾಜ್

ವಿಧಾನಸೌಧದ ಮುಂದೆ ಕಳೆಗಟ್ಟಿದ ಅಕ್ಷರ ಜಾತ್ರೆ

ಸೊಂಪಾದ ಪುಟಗಳು

ಡಿಕೆಶಿ ಅಂದ್ರೆ ಅಮಿತ್ ಶಾ ಅವರಿಗಿಷ್ಟ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ದುಡ್ಡೇ ದೊಡ್ಡಪ್ಪ; ಜಾಹೀರಾತು ಅದರಪ್ಪ!
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಎಷ್ಟೇ ನಿಧಾನವಾಗಿಯಾದರೂ ಪರವಾಗಿಲ್ಲ, ಯಾರಾದರೂ ನಡೆಯುತ್ತಿದ್ದಾರೆ ಅಂದ್ರೆ ಅವರು ತಡವಾಗಿಯಾದರೂ ಗುರಿ ತಲುಪುತ್ತಾರೆ. ಕೆಲವು ಸಲ ಜೀವನದಲ್ಲಿ ವೇಗಕ್ಕಿಂತ ಕ್ರಿಯೆ ಮುಖ್ಯ.

ವಕ್ರತುಂಡೋಕ್ತಿ

ಕೆಲವು ಸಲ ನಮ್ಮ ಪಾಲಿಗೆ ಜೀವನ ಸೂಪ್ ಆಗಿದೆ ಎಂದು ಸಮಾಧಾನಪಡುತ್ತೇವೆ. ಆದರೆ ಆಗ ನಾವು ಫೋರ್ಕ್ ಆಗಿರುತ್ತೇವೆ.

ಜಂಟಿ ಸದನ ಉದ್ದೇಶಿಸಿ ಬೆಳಗ್ಗೆ ರಾಜ್ಯಪಾಲರ ಭಾಷಣ, ಆಡಳಿತ ಪಕ್ಷ, ಪ್ರತಿಪಕ್ಷ ಮುಖಾಮುಖಿಗೆ ಸಜ್ಜು, ಮಾರ್ಚ್ 7ಕ್ಕೆ ಬಜೆಟ್ ಮಂಡನೆ

ಇಂದಿನಿಂದ ಬಜೆಟ್ ಅಧಿವೇಶನ ಆರಂಭ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ವಿಧಾನ ಮಂಡಲದ ಜಂಟಿ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಭಾಷಣ ಮಾಡುವ ಮೂಲಕ 2025ನೇ ಸಾಲಿನ ಮುಂಗಡಪತ್ರ ಅಧಿವೇಶನಕ್ಕೆ ಸೋಮವಾರ ಚಾಲನೆ ಸಿಗಲಿದೆ.

ಸೋಮವಾರ ಉಭಯ ಸದನಗಳ ಕಲಾಪ ರಾಜ್ಯಪಾಲರ ಭಾಷಣ ಹಾಗೂ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸುವ ನಿರ್ಣಯಕ್ಕೆ ಸೀಮಿತವಾಗಲಿದ್ದು ಮಂಗಳವಾರದಿಂದ ಆಡಳಿತ-ಪ್ರತಿಪಕ್ಷಗಳ ನಡುವೆ ವಾಕ್ಸಮರ ನಡೆಸುವ ಸಾಧ್ಯತೆಯಿದೆ. ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 16ನೇ ಬಜೆಟ್ ಅನ್ನು ಮಂಡಿಸಲಿದ್ದಾರೆ.

ಪ್ರಮುಖವಾಗಿ ಬೆಲೆ ಏರಿಕೆ, ಗ್ಯಾರಂಟಿ ಯೋಜನೆಯ ಹಣ ಬಿಡುಗಡೆಯಲ್ಲಿ ವಿಳಂಬ ಸೇರಿದಂತೆ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಸರಕಾರದ ವಿರುದ್ಧ ವಾಕ್ಸಮರ ನಡೆಸಲು ಪ್ರತಿಪಕ್ಷಗಳು ಸಜ್ಜಾಗಿದ್ದರೆ, ಕೋವಿಡ್ ಹಗರಣ, ಕೇಂದ್ರದಿಂದ ಸಿಗದ ಅನುದಾನ ಸೇರಿದಂತೆ ವಿವಿಧ ವಿಷಯಗಳು ಆಡಳಿತ ಪಕ್ಷದ ಬತ್ತಳಿಕೆಯಲ್ಲಿವೆ. ಇದರೊಂದಿಗೆ ಕಳೆದ ಅಧಿವೇಶನದ ಅವಧಿಯಲ್ಲಿ ಸಿ.ಟಿ.ರವಿ-ಲಕ್ಷ್ಮೀ ಹೆಬ್ಬಾಳ್ಕರ್ ನಡುವಿನ 'ಅಶ್ಲೀಲ ಪದ' ಬಳಕೆಯ ಫೈಟ್ ವಿಧಾನಪರಿಷತ್‌ನಲ್ಲಿ ಮತ್ತೆ ಮುಂದುವರೆಯುವ ಸಾಧ್ಯತೆಯಿದೆ. ಸಭಾಪತಿ ಈ ವಿವಾದವನ್ನು ಸೌಹಾರ್ದದಿಂದ ಮುಗಿಸುವ ಇಂಗಿತ ವ್ಯಕ್ತಪಡಿಸಿದದ್ದರೂ, ಆಡಳಿತ ಪಕ್ಷದಿಂದ ಇದಕ್ಕೆ ಪೂರಕ ಸ್ಪಂದನೆ ಸಿಕ್ಕಿಲ್ಲ.

→ 4

ಅಧಿವೇಶನಕ್ಕೆ ಮುನ್ನಾ ದಿನ ವಿಧಾನಸೌಧ ಮೊದಲ ಮಹಡಿಯನ್ನು ಕಂಡು ಸಂಭ್ರಮಿಸಿದ ಜನತೆ.

ಕೇಂದ್ರ ನಡೆ ವಿರುದ್ಧ ಟೀಕೆ?

ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿರುವ ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯಗಳನ್ನು ಪ್ರಸ್ತಾಪಿಸುವ ಸಾಧ್ಯತೆಯಿದೆ. ಗ್ಯಾರಂಟಿ ಯೋಜನೆಗಳನ್ನು ಸಮರ್ಥಿಸಿಕೊಳ್ಳುವ ಅಂಶಗಳನ್ನು ಭಾಷಣದಲ್ಲಿ ಸೇರಿಸುವ ಮೂಲಕ, ಪ್ರತಿಪಕ್ಷ ಬಿಜೆಪಿಗೆ ಟಾಂಗ್ ಕೊಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಇದಕ್ಕೆ ಎದುರಾಗಿ ಪ್ರತಿಭಟನೆ ನಡೆಸಲು ಬಿಜೆಪಿ ಮುಂದಾಗಿದೆ.

ಫೈನಾನ್ಸ್ ವಿಧೇಯಕ ಮಂಡನೆಗೆ ಸಿದ್ಧ

ಸುಗ್ರೀವಾಜ್ಞೆ ಮೂಲಕ ಜಾರಿಗೊಂಡಿರುವ ಮೈಕ್ರೋ ಫೈನಾನ್ಸ್ ವಿಧೇಯಕ, ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜಿಸುವ ಗ್ರೇಟರ್ ಬೆಂಗಳೂರು ವಿಧೇಯಕ ಸೇರಿದಂತೆ ಹಲವು ವಿಧೇಯಕಗಳು ಬಜೆಟ್ ಅಧಿವೇಶನದಲ್ಲಿ ಮಂಡನೆಯಾಗಲಿವೆ. ಇದರ ಜತೆಗೆ ರಾಜ್ಯಪಾಲರು ವಾಪಸ್ ಕಳುಹಿಸಿರುವ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ವಿಧೇಯಕ, ಸಹಕಾರ ಸಂಘಗಳ ವಿಧೇಯಕ ಸೇರಿದಂತೆ ಕೆಲ ವಿಧೇಯಕಗಳನ್ನು ಮರು ಮಂಡನೆ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸಿಟ್ಟಿಂಗ್ ಬಜೆಟ್

ಮಂಡಿ ಚಿಪ್ಪು ನೋವಿನಿಂದ ಬಳಲುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೆಚ್ಚು ಹೊತ್ತು ನಿಲ್ಲುವುದಕ್ಕೆ ಈಗಲೂ ಸಮಸ್ಯೆಯಿರುವುದರಿಂದ ಇದೇ ಮೊದಲ ಬಾರಿಗೆ ಕುಳಿತುಕೊಂಡೇ ಬಜೆಟ್ ಮಂಡಿಸಲಿದ್ದಾರೆ ಎನ್ನಲಾಗಿದೆ. ಇದರೊಂದಿಗೆ ಸಿಎಂ ಸಿದ್ದರಾಮಯ್ಯ ಅವರಿಗೆ ವಿಧಾನಸೌಧದಲ್ಲಿ ವಿಶೇಷ ರ್‍ಯಾಂಪ್ ಸಿದ್ಧಗೊಳ್ಳುತ್ತಿದೆ. ಕಳೆದ ಅನೇಕ ದಿನಗಳಿಂದ ಮಂಡಿ ಚಿಪ್ಪು ನೋವಿನಿಂದ ಬಳಲುತ್ತಿರುವ ಸಿದ್ದರಾಮಯ್ಯ ಅವರಿಗೆ ವೈದ್ಯರು ಆರು ವಾರಗಳ ವಿಶ್ರಾಂತಿಗೆ ಸೂಚಿಸಿದ್ದಾರೆ.

ಪುಸ್ತಕ ಪ್ರಿಯರ ಬಲಪ್ರದರ್ಶನ

ಕೊನೆಯ ದಿನ ಪುಸ್ತಕ ಮೇಳಕ್ಕೆ ಜನಸಾಗರ, ವಿಧಾನಸೌಧದಲ್ಲಿ ಹೊಸ ಕಲರವ

- ಸಹಸ್ರೋಪಾದಿಯಲ್ಲಿ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು
- ಪುಸ್ತಕ ಮೇಳ ವೀಕ್ಷಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್
- ವಿಧಾನಸೌಧದ ಒಳಹೊಕ್ಕು ಸಂಭ್ರಮಿಸಿದ ಸಾರ್ವಜನಿಕರು

ಬೆಂಗಳೂರು: ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರ ವಿಶೇಷ ಆಸಕ್ತಿಯಿಂದ ಇದೇ ಮೊದಲ ಬಾರಿಗೆ ವಿಧಾನ ಸೌಧದ ಆವರಣದಲ್ಲಿ ಆಯೋಜಿಸಿದ್ದ ಪುಸ್ತಕದ ಮೇಳ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದ್ದು, ಭಾನುವಾರ ಹಿಂದೆಂದೂ ಕಾಣದ ಜನಸಾಗರಕ್ಕೆ ಶಕ್ತಿಸೌಧ ಸಾಕ್ಷಿಯಾಯಿತು.

ಐದು ದಿನಗಳ ಪುಸ್ತಕ ಮೇಳ ಸೋಮವಾರ ಕೊನೆಯಾದರೂ, ಸಾರ್ವಜನಿಕ ವೀಕ್ಷಣೆಗೆ ಭಾನುವಾರ ಅಂತಿಮ ದಿನವಾಗಿತ್ತು. ಇದರೊಂದಿಗೆ ವಿಧಾನಸಭೆಯ ಮೊದಲ ಮಹಡಿಯನ್ನು ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶ ನೀಡಿದ್ದರಿಂದ, ಸಾವಿರಾರು ಸಂಖ್ಯೆಯಲ್ಲಿ ಜನರು ವಿಧಾನಸೌಧ ಪ್ರವೇಶಿಸಲು ಮುಗಿಬಿದ್ದರು. ಇದರಿಂದ ಭಾರಿ ಜನದಟ್ಟಣೆ ಉಂಟಾದರೂ, ಎಲ್ಲರಿಗೂ ವಿಧಾನಸಭೆಯನ್ನು ವೀಕ್ಷಿಸಲು ಸಚಿವಾಲಯ ಅವಕಾಶ ನೀಡಿದ್ದು ಸಾರ್ವಜನಿಕ ಪ್ರಶಂಸೆಗೆ ಕಾರಣವಾಯಿತು. ಪುಸ್ತಕ ಪ್ರಿಯರು ಪುಸ್ತಕ ಮೇಳದಲ್ಲಿ ತಮಗೆ ಬೇಕಾದ ಪುಸ್ತಕಗಳನ್ನು ಖರೀದಿಸಿ ಖುಷಿಪಟ್ಟರೆ, ಕುಟುಂಬಸ್ಥರು, ಪ್ರವಾಸಿಗರು ಇದೇ ಮೊದಲ ಬಾರಿಗೆ ಅಮೃತ ಶಿಲೆಯಲ್ಲಿ ಕಟ್ಟಿದ ವಿಧಾನಸೌಧದ ಸೌಂದರ್ಯವನ್ನು ಹತ್ತಿರದಿಂದ ಕಂಡು ಸಂಭ್ರಮಿಸಿದರು. ಯುವ ಜೋಡಿಗಳು ಸೆಲ್ಫಿ ತೆಗೆದುಕೊಂಡು ಖುಷಿಪಟ್ಟರು. ಆದರೆ ನಿರೀಕ್ಷೆಗೂ ಮೀರಿದ ಜನಸಾಗರವನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿ ಹರಸಾಹಸಪಟ್ಟರು.

ವರದಿ ಪುಟ → 3

ಉಕ್ರೇನ್‌ಗೆ ಬ್ರಿಟನ್ ಬೆಂಬಲ ಅಮೆರಿಕಕ್ಕೆ ಟಾಂಗ್

ಲಂಡನ್: ಅಮೆರಿಕ ಜತೆಗಿನ ದ್ವಿಪಕ್ಷೀಯ ಸಂಬಂಧ ಹಳಸಿದ ಬೆನ್ನಲ್ಲೇ ಉಕ್ರೇನ್ ನೆರವಿಗೆ ಧಾವಿಸಿರುವ ಬ್ರಿಟನ್, 226 ಕೋಟಿ ಪೌಂಡ್ ಸಾಲ ನೀಡುವ ಐತಿಹಾಸಿಕ ಒಪ್ಪಂದಕ್ಕೆ ಸಹಿ ಮಾಡಿದೆ. ಅಮೆರಿಕ ನ್ಯಾಟೋ ಸಂಘಟನೆಯಿಂದ ಹೊರಬರಲು ಚಿಂತನೆ ನಡೆಸಿರುವಂತೆಯೇ, ಐರೋಪ್ಯ ರಾಷ್ಟ್ರಗಳು ದೊಡ್ಡಣ್ಣನ ವಿರುದ್ಧ ತಿರುಗಿ ಬೀಳಲು ಮುಂದಾಗಿರುವ ಸೂಚನೆ ಇದು ಎಂದು ವಿಶ್ಲೇಷಿಸಲಾಗಿದೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್ಸ್ಕಿ ಲಂಡನ್‌ನಲ್ಲಿ ಮಾತುಕತೆ ನಡೆಸುತ್ತಿದ್ದಂತೆಯೇ ವರ್ಚುವಲ್ ಸಮಾರಂಭದಲ್ಲಿ ಉಭಯ ದೇಶಗಳ ಹಣಕಾಸು ಸಚಿವರಾದ ರಚೆಲ್ ರೀವ್ ಮತ್ತು ಸೆರ್ಗೀ ಮರ್ಚೆಂಕೊ ಅವರು ಈ ಸಾಲ ಒಪ್ಪಂದವನ್ನು ಅಂತಿಮಗೊಳಿಸಿದರು.

ವಿಧಾನಸೌಧಕ್ಕೂ ಆಸ್ತಿ ತೆರಿಗೆ ಬಾಕಿ ನೋಟಿಸ್

ಬೆಂಗಳೂರು: ಆಸ್ತಿ ತೆರಿಗೆ ಮತ್ತು ವಿದ್ಯುತ್ ಬಿಲ್ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಸರಕಾರಿ ಕಟ್ಟಡಗಳಿಗೆ ಬಿಬಿಎಂಪಿ ನೋಟಿಸ್ ಜಾರಿ ಮಾಡಿದ್ದು, ವಿಧಾನಸೌಧ, ವಿಕಾಸ ಸೌಧ, ರಾಜಭವನ ಸೇರಿದಂತೆ 258 ಸರಕಾರಿ ಕಟ್ಟಡಗಳಿಗೆ ನೋಟಿಸ್ ನೀಡಲಾಗಿದೆ. ರಾಜ್ಯಾದ್ಯಂತ ಬಹುತೇಕ ಸರಕಾರಿ ಇಲಾಖೆಗಳು 8 ಸಾವಿರ ಕೋಟಿ ರು.ವಿದ್ಯುತ್ ಬಿಲ್ ಬಾಕಿಯುಳಿಸಿಕೊಂಡಿವೆ. ಕೆಲ ಕಟ್ಟಡಗಳು 17 ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಆಯಾ ಇಲಾಖೆ ಮುಖ್ಯಸ್ಥರಿಗೆ ಪಾಲಿಕೆ ನೋಟಿಸ್ ನೀಡಿದೆ.

ಕೆರೆಗೆ ಹಾರಿ ಪಿಯು ವಿದ್ಯಾರ್ಥಿನಿ ಆತ್ಮಹತ್ಯೆ

ಮುಧೋಳ: ಪಿಯು ಪರೀಕ್ಷೆಯಲ್ಲಿ ನಕಲು ಮಾಡಿದ ಆರೋಪಕ್ಕೆ ಗುರಿಯಾದ ವಿದ್ಯಾರ್ಥಿನಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ನಡೆದಿದೆ. ಮುಧೋಳದ ಶಾರದಾ ಪಿಯು ಕಾಲೇಜು ವಿದ್ಯಾರ್ಥಿನಿ ತೇಜಸ್ವಿನಿ ದೊಡ್ಡಮನಿ (19) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ. ತೇಜಸ್ವಿನಿ ನಕಲು ಮಾಡಿದ್ದಾಳೆಂದು ದೂರಿದ್ದ ಕಾಲೇಜು ಸಿಬ್ಬಂದಿ ಈ ಸಂಬಂಧ ಪೋಷಕರನ್ನು ಕರೆಸಿ ಬುದ್ಧಿವಾದ ಹೇಳಿದ್ದರು. ಪರೀಕ್ಷೆ ಮುಗಿಸಿ ವಿದ್ಯಾರ್ಥಿನಿ ಕಾಲೇಜಿನಿಂದ ಕೆರೆಯತ್ತ ಧಾವಿಸುವ ದೃಶ್ಯ ಸಿ.ಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಚುನಾವಣೆ ಸಮಯದಲ್ಲಿ ಎಚ್ಚೆತ್ತುಕೊಳ್ಳಬೇಡಿ: ಎಚ್‌ಡಿಕೆ ಎಚ್ಚರಿಕೆ, ಜಿಟಿಡಿ ಗೈರು

ಜೆಡಿಎಸ್ ಬಲವರ್ಧನೆಗೆ ಗೌಡರ ಪಣ

ಬೆಂಗಳೂರು: ಚುನಾವಣೆ ಬಂದಾಗ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ಮೊದಲು ಈಗಿನಿಂದಲೇ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಿ. ಪಕ್ಷದ ಸದಸ್ಯತ್ವ, ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗೆ ಈಗಿನಿಂದಲೇ ತಯಾರಿ ಆರಂಭಿಸಿ ಎಂದು ಜೆಡಿಎಸ್ ನಾಯಕರಿಗೆ ದೇವೇಗೌಡರು, ಕೇಂದ್ರ ಸಚಿವ ಕುಮಾರಸ್ವಾಮಿ ಸೂಚನೆ ನೀಡಿದ್ದಾರೆ.

ಭಾನುವಾರ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಪಕ್ಷದ ದ್ವೈವಾರ್ಷಿಕ ಚುನಾವಣೆ, ಸದಸ್ಯತ್ವ ಅಭಿಯಾನ ಹಾಗೂ ಮುಂಬರುವ ತಾಲ್ಲೂಕು-ಜಿಲ್ಲಾ ಪಂಚಾಯಿತಿ ಚುನಾವಣೆ, ವಿಧಾನಮಂಡಲ ಕಲಾಪದಲ್ಲಿ ಅನುಸರಿಸಬೇಕಾದ ಕಾರ್ಯತಂತ್ರಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಯಿತು.

→ 4

ನಾಯಕನಾಗುವ ಕನಸು ಕಟ್ಟಿಕೊಂಡರೆ ಸಾಲದು. ಅದಕ್ಕೆ ಮೂಲ ಬಂಡವಾಳ ಎಂದರೆ ಪಕ್ಷ ಸಂಘಟನೆ. ನಿಮ್ಮ ಕ್ಷೇತ್ರ, ಮತಗಟ್ಟೆ, ತಾಲೂಕು, ಜಿಲ್ಲಾ ಕೇಂದ್ರಗಳಲ್ಲಿ ಸಂಘಟನೆಯನ್ನು ಬಲವಾಗಿ ಕಟ್ಟಿ. ಸದಸ್ಯತ್ವ ಅಭಿಯಾನವನ್ನು ವೇಗವಾಗಿ ನಡೆಸಬೇಕು. ಲೋಕಸಭೆ, ವಿಧಾನಸಭೆ ಅಥವಾ ಇನ್ನಾವುದೇ ಚುನಾವಣೆ ಬಂದಾಗ ಎಚ್ಚೆತ್ತುಕೊಂಡರೆ ಉಪಯೋಗ ಇಲ್ಲ. ಈಗಲೇ ನಾವು ಸಂಘಟನೆಗೆ ಶಕ್ತಿ ತುಂಬಿ ಜನರ ಜತೆ ನಿಂತರೆ ಚುನಾವಣೆಯಲ್ಲಿ ಪ್ರಬಲ ಪೈಪೋಟಿ ನೀಡಬಹುದು. ಇಲ್ಲವಾದರೆ ನಮ್ಮ ಶ್ರಮ ವ್ಯರ್ಥವಾಗುತ್ತದೆ.
- ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಕಾಪು ಮಾರಿಗುಡಿ ಬ್ರಹ್ಮಕಳಶೋತ್ಸವದಲ್ಲಿ ಭಾಗಿ, ಬಿಜೆಪಿ ವಿರುದ್ಧ ಕಿಡಿ

ಕಾಂಗ್ರೆಸ್ ಒಗ್ಗಟ್ಟಿನ ಮನೆ: ಡಿಕೆಶಿ

ಬೆಂಗಳೂರು: ಬಿಜೆಪಿಯವರು ಮೊದಲು ತಮ್ಮ ಮನೆಯನ್ನು ಕ್ರಮವಾಗಿ ಇಟ್ಟುಕೊಳ್ಳುವುದನ್ನು ನೋಡಲಿ. ಕಾಂಗ್ರೆಸ್‌ನ ಕೆಲವು ಶಾಸಕರು ಹೇಳಿರುವಂತೆ ಹಲವಾರು ಬಿಜೆಪಿ ಶಾಸಕರು ನಮ್ಮೊಂದಿಗೆ ಸಂಪರ್ಕ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ನಾನು ಆ ಬಗ್ಗೆ ಚರ್ಚಿಸಲು ಬಯಸುವುದಿಲ್ಲ. ಬಿಜೆಪಿ ಮುರಿದ ಮನೆಯಾಗಿದ್ದರೆ ಕಾಂಗ್ರೆಸ್ ಒಗ್ಗಟ್ಟಿನ ಮನೆ ಎಂದು ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದರು.

ಉಡುಪಿಯ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ ಮಾರಿಯಮ್ಮ ದೇಗುಲದ ಬ್ರಹ್ಮಕಳಶೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲು, ಇಲ್ಲಿನ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರು, ಮಹಾಶಿವರಾತ್ರಿ ದಿನ ಇಶಾ ಫೌಂಡೇಶನ್ ಕಾರ್ಯಕ್ರಮದಲ್ಲಿ ಸದ್ಗುರು ಜಗ್ಗಿ ವಾಸುದೇವ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆ ವೇದಿಕೆ ಹಂಚಿಕೊಂಡ ಬಗ್ಗೆ ಕೇಳಿಬಂದಿರುವ ಟೀಕೆಗಳಿಗೆ ಪ್ರತಿಕ್ರಿಯೆ ನೀಡಿದರು. ಸದ್ಗುರು ಕರ್ನಾಟಕದವರು. ಅವರು ಕಾವೇರಿ ನೀರಿನ ಕಾರಣಕ್ಕಾಗಿ ಹೋರಾಡುತ್ತಿದ್ದಾರೆ. ಅವರು ಮನೆಗೆ ಬಂದು ನನಗೆ ವೈಯಕ್ತಿಕವಾಗಿ ಆಹ್ವಾನ ನೀಡಿದರು.

→ 4

ಹಿಮಪಾತ ದುರಂತ: ಸಾವಿನ ಸಂಖ್ಯೆ 8ಕ್ಕೆ

ಚಮೋಲಿ: ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಾನಾ ಗ್ರಾಮದ ಬಳಿಯ ಗಡಿ ರಸ್ತೆ ಸಂಸ್ಥೆ (ಬಿಆರ್‌ಒ) ಶಿಬಿರದಲ್ಲಿ ಭಾರಿ ಹಿಮಪಾತ ಸಂಭವಿಸಿ 54 ಕಾರ್ಮಿಕರು ಹಿಮದ ಕೆಳಗೆ ಹೂತು ಹೋಗಿದ್ದ ಪ್ರಕರಣದಲ್ಲಿ ರಕ್ಷಣಾ ತಂಡಗಳು ಅವರಲ್ಲಿ 46 ಕಾರ್ಮಿಕರನ್ನು ರಕ್ಷಿಸಿದ್ದರೂ, 8 ಕಾರ್ಮಿಕರು ದುರಂತದಲ್ಲಿ ಸಾವನ್ನಪ್ಪಿದ್ದಾರೆ. ಭಾನುವಾರ ಕೂಡ ಹುಡುಕಾಟ ಮುಂದುವರಿದಿತ್ತು. ಸುಧಾರಿತ ತಂತ್ರಜ್ಞಾನ ಮತ್ತು ವೈಮಾನಿಕ ಬೆಂಬಲವನ್ನು ಬಳಸಿಕೊಂಡು ಏಜೆನ್ಸಿಗಳು ಶವಗಳನ್ನು ಪತ್ತೆಹಚ್ಚಿದ್ದು, ಹಿಮಪಾತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 8ಕ್ಕೆ ಏರಿಕೆಯಾಗಿದೆ.

ಮಾತಂದ್ರೆ ಮಾತು

ಸಿದ್ದರಾಮಯ್ಯನವರನ್ನು ನೋಡಿದರೆ ನಮಗೆ ಅಯ್ಯೋ ಪಾಪ ಅನಿಸುತ್ತೆ. ಗ್ಯಾರೆಂಟಿಗಳಿಂದ ತಮ್ಮ ಕೈ ತಾವೇ ಕಟ್ಟಿಹಾಕಿಕೊಂಡಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಸರಕಾರ ವಿದ್ಯುತ್ ಬಿಲ್ ಕೂಡ ಕಟ್ಟಲು ಸಾಧ್ಯವಿಲ್ಲದ ಪರಿಸ್ಥಿತಿಗೆ ಬಂದು ನಿಂತಿದೆ. ವಿವಿಧ ಇಲಾಖೆಗಳು 6,000 ಕೋಟಿ ರೂಪಾಯಿ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿವೆ. ಇದು ಸರಕಾರದ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿ.

- ಬಿ ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಫನ್‌ತರಂಗ

- ರಘುಪತಿ ಶೃಂಗೇರಿ -



ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲ ಇಲ್ಲ ಎಂದ ಕರವೇ ಅಧ್ಯಕ್ಷ ನಾರಾಯಣ ಗೌಡ

ಬಂದ್ ಹೋರಾಟಗಾರರ ಕೊನೆಯ ಅಸ್ತ್ರ

ವಿಶ್ವವಾಣಿ ಸಂದರ್ಶನ: ಚಿದಾನಂದ ರುದ್ರಾಪುರಮಠ

ಯಾವುದೇ ಹೋರಾಟ ಗಳು ಹಂತ-ಹಂತವಾಗಿ ಹೋಗ ಬೇಕು. ಮಾತೆತ್ತಿದ ಕೂಡಲೇ ಬಂದ್‌ಗೆ ಕರೆ ನೀಡುವುದು ರಾಜ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಆದ್ದರಿಂದ 'ಸನ್ಮಾನ್ಯ' ವಾಟಾಳ್ ನಾಗರಾಜ್ ಅವರು ಕರೆ ನೀಡಿರುವ ಬಂದ್‌ಗೆ ಕರ್ನಾ ಟಕ ರಕ್ಷಣಾ ವೇದಿಕೆ ಬೆಂಬಲವಿಲ್ಲವೆಂದು ಕರವೇ ರಾಜ್ಯಾಧ್ಯಕ್ಷ ನಾರಾಯಣ ಗೌಡ ಸ್ಪಷ್ಟಪಡಿಸಿದ್ದಾರೆ. 'ವಿಶ್ವವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಬೆಳಗಾವಿ ಗಲಾಟೆಯ ವಿಷಯಕ್ಕೆ ವಾಟಾಳ್ ನಾಗರಾಜ್ ಕರೆ ನೀಡಿರುವ ಕರ್ನಾಟಕ ಬಂದ್, ಅದಕ್ಕೆ ಕರವೇ ಬೆಂಬಲ ನೀಡದಿರುವ ಬಗ್ಗೆ, ಕೆಎಎಸ್ ಪರೀಕ್ಷೆ, ಬೆಳಗಾವಿ ಎಂಇಎಸ್ ಪುಂಡಾಟಿಕೆ, ರಾಜಕೀಯ ಪ್ರವೇಶ ಸೇರಿದಂತೆ ವಿವಿಧ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ್ದಾರೆ.

ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಹಿರಿಯರಿದ್ದಾರೆ, ಆದರೆ, ಅವರು ತೆಗೆದುಕೊಳ್ಳುವ ಅನೇಕ ನಿರ್ಧಾರಗಳು ಆತುರದ್ದಾಗಿರುತ್ತವೆ. ಮಾತೆತ್ತಿದರೆ ಬಂದ್‌ಗೆ ಏಕೆ ಕರೆ ನೀಡುತ್ತಾರೆ ಎನ್ನುವುದು ಗೊತ್ತಿಲ್ಲ. ಅದು ಅವರ ಪ್ರತಿಷ್ಠೆಯೋ ಅಥವಾ ಪ್ರಚಾರದ ಗೀಳೋ ಗೊತ್ತಿಲ್ಲ. ಈ ರೀತಿಯ ಬಂದ್‌ನಿಂದ ರಾಜ್ಯಕ್ಕೆ ನಷ್ಟವೇ ಹೊರತು, ಯಾವುದೇ ಲಾಭವಿಲ್ಲ. ಆದ್ದರಿಂದ ಈ ಬಂದ್‌ಗೆ ನಮ್ಮ ಬೆಂಬಲವಿಲ್ಲ.
- ಕೆ.ಎ. ನಾರಾಯಣಗೌಡ, ಅಧ್ಯಕ್ಷರು, ಕನ್ನಡ ರಕ್ಷಣಾ ವೇದಿಕೆ

ಸಂದರ್ಶನದ ಪೂರ್ಣಪಾಠಕ್ಕೆ **ವಿಶ್ವವಾಣಿ ಟಿವಿ** ನೋಡಿ

ಗೌಡರು ಹೇಳಿದ್ದು

- ಕರ್ನಾಟಕಕ್ಕೆ ಬರುವ ಅನ್ಯ ರಾಜ್ಯದವರಿಂದ ಕನ್ನಡಿಗರಿಗೆ ಉದ್ಯೋಗ ಸಿಗುತ್ತಿಲ್ಲ
- ವಲಸಿಗರಿಗೆ ಕನ್ನಡ ಕಲಿಯ ಬೇಕೆನ್ನುವ ಕಾನೂನಿಲ್ಲ; ಅದಕ್ಕೆ ಕರುನಾಡಲ್ಲಿ ಹಿಂದಿ ವಿಜೃಂಭಿಸುತ್ತಿದೆ.
- ಕೆಪಿಎಸ್‌ಸಿಯಿಂದ 78 ಸಾವಿರ ಅಭ್ಯರ್ಥಿಗಳಿಗೆ ಸಮಸ್ಯೆಯಾಗಿದೆ, ಇವರಿಗೆ ನ್ಯಾಯ ಕೊಡಿಸಲು ನಮ್ಮ ಆದ್ಯತೆ
- ಜಾಗೃತಿ, ಮನವಿ, ಸ್ಪಂದನೆಯ ಬಳಿಕ ಬಂದ್ ಮಾಡಬೇಕು; ಬಂದ್ ಎನ್ನುವುದು ಮೊದಲ ಅಸ್ತ್ರವಾಗಬಾರದು.
- ನನ್ನ ಬಳಿ ರಾಜಕೀಯಕ್ಕೆ ಬರುವಷ್ಟು ದುಡ್ಡಿಲ್ಲ; ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಬಂದರೆ ಯೋಚನೆ ಮಾಡಬಹುದು.

● ಬಂದ್‌ಗೆ ನಿಮ್ಮ ಬೆಂಬಲ ಏಕಿಲ್ಲ?

ಬಂದ್‌ನಿಂದ ರಾಜ್ಯ ಸರಕಾರದ ಬೊಕ್ಕಸಕ್ಕೆ ನಷ್ಟವೇ ಹೊರತು ಲಾಭವಿಲ್ಲ. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ಬಂದ್‌ಗಳು ಹೋರಾಟಗಾರರ ಪ್ರತ್ಯಸ್ತ್ರ ಅಸ್ತ್ರವಾಗಿರಬಾರದು. ಆರಂಭದಲ್ಲಿ ಜನರನ್ನು ಜಾಗೃತಿಗೊಳಿಸಬೇಕು, ನಾಡಿಮಿಡಿತ ಅರಿಯಬೇಕು, ಸರಕಾರದ ಸ್ಪಂದನೆ ನೋಡಿ ಹೋರಾಟ ಮಾಡಬೇಕು. ಅದ್ಯಾವುದಕ್ಕೂ ಸ್ಪಂದನೆ ಸಿಗದಿದ್ದರೆ 'ಬಂದ್' ಕೊನೆಯ ಬ್ರಹ್ಮಾಸ್ತ್ರವಾಗಬೇಕು. ನಮ್ಮ ಪ್ರತಿಷ್ಠೆಗಾಗಿ ಮಾತಿಗೆ ಮುಂಚೆ ಬಂದ್ ಮಾಡುವುದು ಸರಿಯಲ್ಲ. ಕೆಪಿಎಸ್‌ಸಿ ಮಾಡಿರುವ ಎಡವಟ್ಟಿನಿಂದ ಅತಂತ್ರದಲ್ಲಿರುವ 76 ಸಾವಿರ ಅಭ್ಯರ್ಥಿಗಳ ಹಿತ ಕಾಪಾಡುವುದು ನಮ್ಮ ಮೊದಲ ಆದ್ಯತೆ ಆಗಿದೆ. ಅವರ ಪರವಾಗಿ ನಾವು ಹೋರಾಡಬೇಕಿದೆ. ಆದ್ದರಿಂದ ವಾಟಾಳ್ ನಾಗರಾಜ್ ಅವರು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲವಿಲ್ಲ.

● ಕೆಪಿಎಸ್‌ಸಿ ಸಮಸ್ಯೆ ಬಗ್ಗೆ ಏನು ಹೇಳುತ್ತೀರಾ?

ಕೆಪಿಎಸ್‌ಸಿ ಕರ್ಮಕಾಂಡವನ್ನು ಹಿಂದಿನಿಂದಲೂ ನೋಡಿಕೊಂಡು ಬಂದಿದ್ದೇವೆ. ಅದರಲ್ಲಿ ಯಾರ ಯಾರದು ಎಷ್ಟೆಷ್ಟು ಪಾಲು ಎಂಬುವುದು ಇಂದಿಗೂ ಅರ್ಥವಾಗಿಲ್ಲ. ಅಲ್ಲಿರುವುದು ಮಹಾನ್ ಭ್ರಷ್ಟರ ಕೂಟ. ಪ್ರಾಮಾಣಿಕವಾಗಿ ಓದಿದ ಅಭ್ಯರ್ಥಿಗಳ ಭವಿಷ್ಯದ ಬಗ್ಗೆ ಅವರಿಗೆ ಅರಿವಿಲ್ಲ. ಇಷ್ಟೆಲ್ಲಾ ಅವಾಂತರಗಳು ನಡೆಯುತ್ತಿದ್ದರೂ ಮುಖ್ಯಮಂತ್ರಿಗಳು ಮೌನವಾಗಿ ಕೂತಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಕನ್ನಡ ರಾಮಯ್ಯ ಎಂದು ಜನ ಕರೆಯುತ್ತಾರೆ. ಸ್ಪರ್ಧಾರ್ಥಿಗಳ ನೋವಿಗೆ ಸ್ಪಂದಿಸಿ ಈ ಮಾತನ್ನು ಸಾಬೀತುಪಡಿಸಬೇಕಾಗಿದೆ.

ಸಂದರ್ಶನದ ಪೂರ್ಣಪಾಠ → 5

ಹಂಪಿ ಉತ್ಸವಕ್ಕೆ ಅದ್ದೂರಿ ತೆರೆ

ವಿಜಯನಗರ: ಗತವೈಭವ ಸಾರಿದ ಇಲ್ಲಿನ ಹಂಪಿಯ ನೆಲದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ 'ಹಂಪಿ ಉತ್ಸವ-2025' ಭಾನುವಾರ ರಾತ್ರಿ ವರ್ಣರಂಜಿತವಾಗಿ ತೆರೆಕಂಡಿತು. ಮೂರು ದಿನಗಳ ಕಾಲ ನಡೆದ ಉತ್ಸವದಲ್ಲಿ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಕಲೆ, ಸಾಹಿತ್ಯ, ಸಂಗೀತ, ನೃತ್ಯದ ಮೂಲಕ ಮೆಲುಕು ಹಾಕಲಾಯಿತು.

ಉತ್ಸವದ ಕೊನೆಯ ದಿನವಾದ ಭಾನುವಾರ ರಾತ್ರಿ ನಡೆದ ಸಮಾರೋಪ ಸಮಾರಂಭದಲ್ಲಿ ಖ್ಯಾತ ಚಿತ್ರನಟಿ ರಮ್ಯಾ ಭಾಗವಹಿಸಿ ನೆರೆದಿದ್ದ ಪ್ರೇಕ್ಷಕರ ಮನ ರಂಜಿಸಿದರು.

ಸಮಾರೋಪ ಸಮಾರಂಭದ ವೇದಿಕೆ ಕಾರ್ಯಕ್ರಮದ ಆರಂಭಕ್ಕೂ ಮುನ್ನ ನಡೆದ ಸಾಂಸ್ಕೃತಿಕ ಕಾರ್ಯ ಕ್ರಮದಲ್ಲಿ ಬೆಂಗಳೂರಿನ ಅರ್ಥ್ ಚಾರಿಟೇಬಲ್ ಟ್ರಸ್ಟ್ ಪ್ರದರ್ಶಿಸಿದ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆ 'ಶ್ರೀಕೃಷ್ಣ ದೇವರಾಯ ವೈಭವ' ನೃತ್ಯರೂಪಕ ನೋಡುಗರನ್ನು ಮನರಂಜಿಸಿತು.

ಸಮಾಚಾರ ಸಣ್ಣದಲ್ಲ

ಐಜಿಪಿ ರೂಪಾ ವಿರುದ್ಧ ಸಿಎಸ್‌ಗೆ ವರ್ತಿಕಾ ದೂರು



ಬೆಂಗಳೂರು: ಐಪಿಎಸ್ ಅಧಿಕಾರಿ ರೂಪಾ ವಿರುದ್ಧ ಮತ್ತೊಬ್ಬ ಮಹಿಳಾ ಅಧಿಕಾರಿ ದೂರು ನೀಡಿದ್ದಾರೆ. ಈ ಹಿಂದೆ ಹಿರಿಯ ಅಧಿಕಾರಿಗಳ ಮುಂದೆಯೇ ಸಭೆ ಕೊಠಡಿಯಲ್ಲಿ ಗಲಾಟೆ ಮಾಡಿಕೊಂಡಿದ್ದ ಆಂತರಿಕ ಭದ್ರತಾ ವಿಭಾಗದ ಐಜಿಪಿ ರೂಪಾ ಮೌದ್ಗಿಲ್ ಮತ್ತು ಡಿಐಜಿ ವರ್ತಿಕಾ ಕಟಿಯಾರ್ ಸುದ್ದಿಯಾಗಿದ್ದರು. ಈಗ ಐಜಿಪಿ ರೂಪಾ ವಿರುದ್ಧ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ವರ್ತಿಕಾ ಕಟಿಯಾರ್ ದೂರು ನೀಡಿದ್ದಾರೆ. ರೂಪಾ ಅವರು ನನ್ನ ಕೊಠಡಿಯಲ್ಲಿ ಕೆಳಹಂತದ ಸಿಬ್ಬಂದಿ ಬಳಸಿಕೊಂಡು ದಾಖಲೆಗಳನ್ನು ಇರಿಸಿದ್ದಾರೆ. ಅಲ್ಲದೇ ಆ ದಾಖಲೆಗಳನ್ನು ಬಳಸಿ ನನ್ನ ವಿರುದ್ಧ ಷಡ್ಯಂತ್ರ ಹೇರುವ ಸಾಧ್ಯತೆ ಇದೆ ಎಂದು ವರ್ತಿಕಾ ಕಟಿಯಾರ್ ದೂರಿದ್ದಾರೆ.

ವರ್ತಿಕಾ ಕಟಿಯಾರ್ ದೂರಿನಲ್ಲಿ ಏನಿದೆ?: ಸದ್ಯ ರೂಪಾ ವಿರುದ್ಧ ಸರಕಾರದ ಮುಖ್ಯಕಾರ್ಯದರ್ಶಿಗಳಿಗೆ ವರ್ತಿಕಾ ಕಟಿಯಾರ್ ದೂರು ನೀಡಿದ್ದು, ಕೆಳಹಂತದ ಮೂವರು ಅಧಿಕಾರಿಗಳನ್ನ (ಮಲ್ಲಿಕಾರ್ಜುನ್, ಮಂಜುನಾಥ್ ಮತ್ತು ಕಿರಣ್) ಬಳಸಿ ದಾಖಲೆಗಳನ್ನು ನನ್ನ ಕೊಠಡಿಯಲ್ಲಿ ಇರಿಸಿದ್ದಾರೆ. ವಾಟ್ಸಪ್ ಮೂಲಕ ಫೋಟೋ ತೆಗೆಸಿದ್ದಾರೆ. ಕಂಟ್ರೋಲ್ ರೂಮ್‌ನಿಂದ ಕೀ ತಂದು ಕೊಠಡಿ ತೆರೆಯಲಾಗಿದೆ. ದುರುದ್ದೇಶದಿಂದ ಫೋಟೋ ತೆಗೆಸಲಾಗಿದ್ದು, ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ ಎಂದು ವರ್ತಿಕಾ ಕಟಿಯಾರ್ ಆರೋಪಿಸಿದ್ದಾರೆ.

ಚರ್ಮರೋಗ ಕುರಿತು ಬೃಹತ್ ಸ್ಕಿನ್ನಥಾನ್

ಬೆಂಗಳೂರು: ಚರ್ಮದ ಆರೈಕೆಗಾಗಿ ಜನ ಜಾಗೃತಿ ಮತ್ತು ನಕಲಿ ವೈದ್ಯರ ಬಗ್ಗೆ ಎಚ್ಚರಿಕೆ ವಹಿಸುವಂತೆ ಅರಿವು ಮೂಡಿಸಲು ಭಾನುವಾರ ನಗರದ ಎಚ್ ಎಸ್‌ಆರ್ ಬಡಾವಣೆಯ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ 10, 5 ಮತ್ತು 3 ಕಿಲೋಮೀಟರ್ ಬೃಹತ್ ಸ್ಕಿನ್ನಥಾನ್ ಓಟ ನಡೆಯಿತು. ಚರ್ಮರೋಗ ವೈದ್ಯರ ಸಂಘ, ಐಎಡಿವಿಎಲ್ ಕರ್ನಾಟಕ ಸಂಘ, ಇಂಡಿಯನ್ ಅಸೋಸಿಯೇಷನ್ ಆಫ್ ಡರ್ಮ ಟಾಲಜಿಸ್ಟ್, ವೆನರಿಯಾಲಜಿಸ್ಟ್ ಮತ್ತು ಬಿಡಿಎಸ್ ಸಂಸ್ಥೆಗಳಿಂದ ಆಯೋಜಿಸಿದ್ದ ಓಟದಲ್ಲಿ, ನಕಲಿ ವೈದ್ಯರ ಬಗ್ಗೆ ಎಚ್ಚರಿಕೆ, ಅತಿಯಾದ ಸ್ಟಿರಾಯ್ಡ್ ಬಳಕೆ, ಸ್ವಯಂ ಔಷಧೋಪಚಾರ, ಚರ್ಮದ ಆರೈಕೆಗಾಗಿ ಉತ್ತಮ ಅಭ್ಯಾಸ ರೂಢಿಸಿಕೊಳ್ಳುವ, ಸಾಮಾನ್ಯ ಚರ್ಮ ರೋಗಕ್ಕೆ ಉತ್ತಮ ಚಿಕಿತ್ಸಾ ವಿಧಾನಗಳ ಕುರಿತು ಭಿತ್ತಿಪತ್ರ ಹಿಡಿದು ಜನ ಸಾಮಾನ್ಯರಿಗೆ ಮಾಹಿತಿ ನೀಡಿದರು. ಇಂಡಿಯನ್ ಅಸೋಸಿಯೇಷನ್ ಆಫ್ ಡರ್ಮಟಾಲಜಿಸ್ಟ್, ವೆನರಿಯಾಲಜಿಸ್ಟ್ ಅಧ್ಯಕ್ಷ ಡಾ.ಮಂಜುನಾಥ್ ಹುಲ್ಮನಿ, ಡಾ.ಸಿ. ಮಹೇಶ್ ಕುಮಾರ್ ಮತ್ತು ಬೆಂಗಳೂರು ಚರ್ಮ ರೋಗ ವೈದ್ಯರ ಸಂಘದ ಅಧ್ಯಕ್ಷ ಡಾ.ಎಸ್.ಸಚ್ಚಿದಾನಂದ್ ಜನರಿಗೆ ಚರ್ಮರೋಗದ ಕುರಿತಂತೆ ಮಾಹಿತಿ ನೀಡಿದರು.

ರಾಜ್ಯದಲ್ಲಿ ಅಗ್ನಿಶಾಮಕ ಇಲಾಖೆಯಿಂದ ಸಾವಿರಕ್ಕೂ ಹೆಚ್ಚು ಜನರ ಪಾರು

ಅಗ್ನಿ ಅವಘಡ: 4 ಸಾವಿರ ಕೋಟಿ ರು.ಆಸ್ತಿಗಳ ರಕ್ಷಣೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಭವಿಸಿದ ವಿವಿಧ ಅಗ್ನಿ ಅವಘಡಗಳ ರಕ್ಷಣಾ ಕಾರ್ಯಾಚರಣೆಯಲ್ಲಿ ರಾಜ್ಯ ತುರ್ತು ಹಾಗೂ ಅಗ್ನಿಶಾಮಕ ಇಲಾಖೆಯು 4,050 ಕೋಟಿ ರು.ಗಿಂತ ಹೆಚ್ಚು ಆಸ್ತಿ ರಕ್ಷಿಸಿದೆ. 973 ಕೋಟಿ ರು. ಮೌಲ್ಯದ ಚರ ಹಾಗೂ ಸ್ಥಿರಾಸ್ತಿ ನಷ್ಟವಾಗಿದೆ.

ಅಗ್ನಿ ದುರಂತಗಳಲ್ಲಿ ಸಿಲುಕಿದ್ದ 1,016 ಜನರ ಅಮೂಲ್ಯ ಜೀವ ಉಳಿಸಲಾಗಿದೆ. ಬೆಂಕಿಯ ಕೆನ್ನಾಲಿಗೆಗೆ ಸಿಲುಕಿದ್ದ 169 ಜನರು ಮೃತರಾದರೆ, 772 ಮಂದಿ ಗಾಯಗೊಂಡಿದ್ದಾರೆ. ಕಟ್ಟಡ ಕುಸಿತ, ವಿಷಕಾರಿ ಅನಿಲ ಸೋರಿಕೆ, ನೀರಿನಲ್ಲಿ ಮುಳುಗುವುದು ಸೇರಿದಂತೆ ಮಾನವನಿರ್ಮಿತ ಹಾಗೂ ಪ್ರಾಕೃತಿಕ ವಿಕೋಪದಂತಹ ರಕ್ಷಣಾ ಕಾರ್ಯಾಚರಣೆಯಲ್ಲಿ 9,165 ಜನರನ್ನು ರಕ್ಷಿಸಿದರೆ, 4,010 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಅನಾಹುತ ತಡೆದ ಪಡೆ: ರಾಜ್ಯದಲ್ಲಿ ಬಿಸಿಲಿನ ತಾಪ ದಿನೇ ದಿನೇ ಅಧಿಕವಾಗುತ್ತಿದ್ದು, ನಿರಂತರವಾಗಿ ಕಾಡ್ಗಿಚ್ಚು ಸೇರಿ ಇನ್ನಿತರ ಅಗ್ನಿ ದುರಂತಗಳು ಸಂಭವಿಸುತ್ತಿವೆ. ಕಾರ್ಯಾಚರಣೆಗೆ ತೊಡಕಾಗದಂತೆ ಪ್ರತಿನಿತ್ಯ ಬೆಳಗ್ಗೆ ಹಾಗೂ ಸಂಜೆ ಅಗ್ನಿಶಾಮಕ ವಾಹನ ಸ್ಥಿತಿಗತಿ, ಉಪಕರಣಗಳ ಬಳಕೆ ತಪಾಸಣೆ, ಮುಖ್ಯವಾಗಿ ನೀರಿನ ಲಭ್ಯತೆ ಬಗ್ಗೆ ಎರಡು ಬಾರಿ ಪರಿಶೀಲಿಸುತ್ತಿದ್ದಾರೆ. ಮಳೆಗಾಲದಲ್ಲಿ ಮುಂಜಾಗ್ರತಾ ಕ್ರಮವಾಗಿ ಬೋಟಿಂಗ್, ನೀರಿನ ಪಂಪ್, ಅಗತ್ಯ ಸಲಕರಣೆ ಸೇರಿದಂತೆ ಇನ್ನಿತರ ಉಪಕರಣಗಳನ್ನು ಸಿದ್ಧವಾಗಿಸಿಕೊಂಡು ಸಂಭವಿಸುವ ಅನಾಹುತ ಹೆಚ್ಚಾಗದಂತೆ ತಡೆದಿದ್ದಾರೆ. ರಾಜ್ಯದಲ್ಲಿಒಟ್ಟು 219 ಅಗ್ನಿಶಾಮಕ ಠಾಣೆಗಳಿದ್ದು, ಅಗತ್ಯ ಅನುಗುಣವಾಗಿ ಅಗ್ನಿಶಾಮಕವಾಹನ ಸೇರಿದಂತೆ ಇನ್ನಿತರ ರಕ್ಷಣಾ ವಾಹನಗಳಿಂದ ತುರ್ತು ಸಂದರ್ಭಗಳಲ್ಲಿ ಬಳಸಲಾಗುತ್ತಿದೆ ಎಂದು ಅಗ್ನಿಶಾಮಕ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2022ರಿಂದ 2024ರವರೆಗೆ ರಾಜ್ಯದಲ್ಲಿ ನಡೆದ ಅಗ್ನಿ ದುರಂತ ಹಾಗೂ ರಕ್ಷಣಾ ಕಾರ್ಯಾಚರಣೆ

ವರ್ಷ	ಕರೆಗಳು	ಆಸ್ತಿ ನಷ್ಟ (ರು.ಗಳಲ್ಲಿ)	ಆಸ್ತಿ ರಕ್ಷಣೆ (ರು.ಗಳಲ್ಲಿ)
2022	17,074	238,94,49,453	787,17,01113
2023	28,718	404,4,570,564	1762,870,5,473
2024	23,832	330,26,68,798	1500,87,93,374
ಒಟ್ಟು		973,66,88,815	4050,091,99,960

ಹಲವು: ಚಾಮರಾಜನಗರ, ಮೈಸೂರು, ಕೊಡಗು, ಶಿವಮೊಗ್ಗ,ಬೆಳಗಾವಿ ಸೇರಿದಂತೆ ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚು ಕಾಣಿಸಿಕೊಂಡರೆ ಉತ್ತರ ಕರ್ನಾಟಕ ಹಾಗೂ ಬಯಲುಸೀಮೆ ಜಿಲ್ಲೆಗಳ ಒಣ ಪ್ರದೇಶದಲ್ಲಿ ಬಿಸಿಲ ಧಗೆಗೆ ಹೊತ್ತಿ ಉರಿಯುವ ಬೆಂಕಿ, ಕೈಗಾರಿಕಾ ಹಾಗೂ ವಸತಿ ಪ್ರದೇಶಗಳಲ್ಲಿ ನಡೆಯುವ ಶಾರ್ಟ್ ಸರ್ಕ್ಯೂಟ್, ಸಿಲಿಂಡರ್ ಸ್ಫೋಟ ಸೇರಿದಂತೆ ಮಾನವ ನಿರ್ಲಕ್ಷ್ಯದ ಕಾರಣಗಳಿಗಾಗಿ ಅಗ್ನಿ ಅವಘಡಗಳು ಹೆಚ್ಚಾಗಿ ಸಂಭವಿಸಿವೆ. ಕಳೆದ ಮೂರು ವರ್ಷಗಳಲ್ಲಿ 69,624 ಅಗ್ನಿ ಕರೆಗಳು ಬಂದಿವೆ. ತ್ವರಿಗತಿಯಲ್ಲಿ ಬೆಂಕಿ ನಂದಿಸಿದರೂ 2022ರಲ್ಲಿ 238 ಕೋಟಿ ರು., 2023ರಲ್ಲಿ 404 ಕೋಟಿ ರು. ಹಾಗೂ 2024ರಲ್ಲಿ 330 ಕೋಟಿ ರು. ಮೌಲ್ಯದ ಆಸ್ತಿಪಾಸ್ತಿ ಬೆಂಕಿಯಲ್ಲಿ ಕರಕಲಾಗಿದೆ. ಅದೇ ರೀತಿ 2022ರಲ್ಲಿ 787 ಕೋಟಿ ರು., 2023ರಲ್ಲಿ 1752 ಕೋಟಿ ರು., ಹಾಗೂ ಕಳೆದ ವರ್ಷ 1,500 ಕೋಟಿ ರು.ಗಿಂತ ಹೆಚ್ಚು ಆಸ್ತಿಯನ್ನು ರಕ್ಷಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

1,016 ಜನರ ಪ್ರಾಣ ರಕ್ಷಣೆ: ನೈಸರ್ಗಿಕ ವಿಕೋಪ ಹಾಗೂ ಮಾನವ ನಿರ್ಲಕ್ಷ್ಯ ಕಾರಣದಿಂದಾಗಿ ಸಂಭವಿಸುವ ಅನಾಹುತ ಸಂದರ್ಭಗಳಲ್ಲಿ ಆತ್ಯಾಧುನಿಕ ಉಪಕರಣ ಹಾಗೂ ತಂತ್ರಜ್ಞಾನ ಬಳಸಿಕೊಂಡು ಮೂರು ವರ್ಷದಲ್ಲಿ ಸಾವಿರಾರು ಮಂದಿಯ ಪ್ರಾಣ ರಕ್ಷಿಸಲಾಗಿದೆ. ಕಾರ್ಯಾಚರಣೆಯಲ್ಲಿ 1,016 ಜನರ ಪ್ರಾಣ ಉಳಿಸಿದರೆ, 169 ಮಂದಿ ಸಾವನ್ನಪ್ಪಿದ್ದಾರೆ. 722 ಮಂದಿ ಬೆಂಕಿಯಲ್ಲಿ ಸಿಲುಕಿ ಗಂಭೀರ ಗಾಯಗೊಂಡಿದ್ದಾರೆ. ಬೆಂಕಿ ದುರಂತ ಹೊರತುಪಡಿಸಿದರೆ ಇನ್ನುಳಿದ ತುರ್ತು ರಕ್ಷಣಾ ಕಾರ್ಯಾಚರಣೆಯಲ್ಲಿ 9,165 ಮಂದಿ ರಕ್ಷಣೆ ಮಾಡಲಾಗಿದೆ. 4,010 ಜನರು ಪ್ರಾಣ ಕಳೆದುಕೊಂಡಿದ್ದಾರೆ. ರಕ್ಷಣಾ ಕಾರ್ಯಾಚರಣೆ ಕೈಗೊಂಡರೂ ಮರದ ಕೊಂಬೆ, ತಂತಿ, ಗಾಳಿಪಟ ಹಾಗೂ ಕಂದಕಕ್ಕೆ ಬಿದ್ದು ಒದ್ದಾಡುತ್ತಿದ್ದ 395 ಹಾಗೂ ವಿವಿಧ ಪ್ರಾಣಿ-ಪಕ್ಷಿಗಳು ಮೃತಪಟ್ಟಿರುವುದಾಗಿ ಅಧಿಕಾರಿಗಳು ವಿವರಿಸಿದ್ದಾರೆ.

ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್‌ಗುರೂಜಿ ಆಶಯ

ಬೆಂಗಳೂರು ಕರಗ ವಿಶ್ವವಿಖ್ಯಾತಿಯಾಗಲಿ

ದ್ರೌಪದಿ ಪ್ರವರ ದರ್ಪಣ ಕಾರ್ಯಕ್ರಮವನ್ನು ಆರ್ಟ್ ಆಫ್ ಲೀವಿಂಗ್ ನ ರವಿಶಂಕರ್ ಗುರೂಜಿ ಉದ್ಘಾಟಿಸಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಂಸದ ಪಿ.ಸಿ.ಮೋಹನ್, ಕೆ.ಎನ್.ಫೌಂಡೇಷನ್ ಸಿಇಒ ರಾಜ್ ಕೃಷ್ಣಮೂರ್ತಿ, ಪಿ.ಆರ್.ರಮೇಶ್, ಗೋವಿಂದರಾಜು. ಕೆ.ನಾರಾಯಣ, ಮು.ಕೃಷ್ಣಮೂರ್ತಿ, ಸಿ.ಜಯರಾಜ್, ಸುಬ್ಬಣ್ಣ.ಎಚ್ ಇದ್ದರು.

ಬೆಂಗಳೂರು: ಬೆಂಗಳೂರಿನ ಕರಗ ಯಾವತ್ತಿಗೂ ತನ್ನ ಮಹತ್ವ ಕಳೆದುಕೊಳ್ಳುವುದಿಲ್ಲ, ಈ ಕರಗ ಜಗತ್ ವಿಖ್ಯಾತಿಯಾಗಲಿ ಎಂದು ದ್ರೌಪದಿ ಪ್ರವರ ದರ್ಪಣ ಕಾರ್ಯಕ್ರಮದಲ್ಲಿ ಆರ್ಟ್ ಆಫ್ ಲೀವಿಂಗ್ ನ ರವಿಶಂಕರ್ ಗುರೂಜಿ ಆಶಿಸಿದರು.

ಕರ್ನಾಟಕ ರಾಜ್ಯ ವಹ್ನಿಕುಲ ಕ್ಷತ್ರಿಯ ಸಂಘ ಹಾಗೂ ಕೆ.ಎನ್.ಫೌಂಡೇಶನ್ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು ಕರಗವು ಮೈಸೂರು ದರಸಾದಷ್ಟೆ ಮಹತ್ವದಾಗಿದೆ. ಕರಗವು ಪುರಾತನ ಹಿನ್ನಲೆ ಹೊಂದಿದೆ, ಆದರೆ ಹೊರಗಿನಿಂದ ಬಂದು ಬೆಂಗಳೂರಿನಲ್ಲಿ ವಾಸಿಸುತ್ತಿರುವವರಿಗೆ ಕರಗದ ಮಹತ್ವ ಅರಿವಿಲ್ಲ. ಕರಗ ಕೇವಲ ಕೆಲವೇ ರಸ್ತೆಗಳಿಗೆ ಸೀಮಿತಗೊಳ್ಳದೆ, ಅದರ ವ್ಯಾಪ್ತಿ ವಿಸ್ತರಣೆಯಾಗಲಿ ಎಂದರು.

ತಮಿಳುನಾಡಿನ ಪಿಎಂಕೆ ಪಕ್ಷದ ಶಾಸಕ ಜಿ.ಕೆ.ಮಣಿ ಮಾತನಾಡಿ, ಕರ್ನಾಟಕದಲ್ಲಿ ವಹ್ನಿಕುಲ ಸಮುದಾಯ 40 ಲಕ್ಷ ಜನಸಂಖ್ಯೆ ಹೊಂದಿದ್ದು, ಅದಕ್ಕೆ ಸರಿಹೊಂದುವಂತೆ ಸರಕಾರಿ ಉದ್ಯೋಗ ಪಡೆದಿಲ್ಲ. ಮುಂದಾದರು ಸರಕಾರದ ಉನ್ನತ ಹುದ್ದೆಗಳನ್ನು ಪಡೆಯುವ ನಿಟ್ಟಿನಲ್ಲಿ ಗಮನ ವಹಿಸಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕರಗ ಪೂಜಾರಿಗಳಿಗೆ ಹಾಗೂ ಮಹಿಳಾ ಸಾಧಕಿಯರಿಗೆ ಗೌರವ ಸಮರ್ಪಣೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆದಿಶಕ್ತಿ ಮಹಾಸಂಸ್ಥಾನ ಮಠದ ಪ್ರಣವಾನಂದ ಪುರಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಖಾಸಗಿ ಕಂಪನಿ ಉದ್ಯೋಗಿ ಕಾರಿನಲ್ಲಿ ಶಂಕಾಸ್ಪದ ಸಾವು

ಬೆಂಗಳೂರು: ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ಕಾರಿನಲ್ಲಿ ಅನುಮಾನಸ್ಪದವಾಗಿ ಮೃತಪಟ್ಟಿರುವ ಘಟನೆ ಕೊಡಿಗೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ತಿಂಡ್ಲು ಮುಖ್ಯ ರಸ್ತೆಯಲ್ಲಿ ನಡೆದಿದೆ.

ಮತ್ತೀಕರೆಯ ಗೋಕುಲ ಬಡಾವ ಣೆಯ ಅಶ್ವಿನ್ ಕುಮಾರ್ (42) ಮೃತ ವ್ಯಕ್ತಿ. ಶನಿವಾರ ಮನೆಯಿಂದ ಕಾರಿನಲ್ಲಿ ಹೊರಟಿದ್ದ ಅಶ್ವಿನ್ ಕುಮಾರ್ ಅವರು ತಡರಾತ್ರಿಯಾದರೂ ಮನೆಗೆ ಬಾರದ ಕಾರಣ ಆತಂಕಗೊಂಡ ಕುಟುಂಬಸ್ಥರು ಅವರ ಮೊಬೈಲ್‌ಗೆ ಕರೆ ಮಾಡಿದರೂ ಪ್ರತಿಕ್ರಿಯೆ ಸಿಗದಿದ್ದಾಗ ಪೊಲೀಸರಿಗೆ ಮಾಹಿತಿ ನೀಡಿದ್ದರು. ಕೊಡಿಗೇಹಳ್ಳಿ ಠಾಣೆ ಪೊಲೀಸರು ಮೊಬೈಲ್ ನಂಬರ್ ಪಡೆದು ಟವರ್ ಲೊಕೇಶನ್ ಆಧಾರದ ಮೇಲೆ ಕಾರ್ಯಾಚರಣೆ ಕೈಗೊಂಡಾಗ ಅಶ್ವಿನ್ ಕುಮಾರ್ ಅವರು ತಿಂಡ್ಲು ಮುಖ್ಯ ರಸ್ತೆಯ ಮೇಲೇತುವೆ ಬಳಿ ಇರುವುದು ಗೊತ್ತಾಗಿ ಸುಮಾರು 11.30ರಲ್ಲಿ ಅಲ್ಲಿಗೆ ಹೋಗಿದ್ದಾರೆ. ಕಾರಿನ ಚಾಲಕನ ಆಸನದಲ್ಲಿ ಮಲಗಿದ್ದ ಸ್ಥಿತಿಯಲ್ಲಿದ್ದ ಅಶ್ವಿನ್ ಕುಮಾರ್ ಅವರನ್ನು ಕಾರಿನ ಗಾಜು ತಟ್ಟಿ ಎಬ್ಬಿಸಲು ಪ್ರಯತ್ನಿಸಿದಾಗ ಯಾವುದೇ ಸ್ಪಂದನೆ ಸಿಗಲಿಲ್ಲ. ನಂತರ ಗಾಜು ಒಡೆದು ಪರಿಶೀಲಿಸಿದಾಗ ಅವರು ಮೃತಪಟ್ಟಿರುವುದು ಬಹಿರಂಗವಾಗಿದೆ.

ಕಾರು ಚಲಾಯಿಸುವಾಗ ಅವರು ಕಿಟಕಿ ಗಾಜುಗಳನ್ನು ಬಂದ್ ಮಾಡಿ ಎಸಿ ಆನ್ ಮಾಡಿರುವುದು ಗೊತ್ತಾಗಿದ್ದು, ತೈಲ ಖಾಲಿಯಾದ ಹಿನ್ನಲೆಯಲ್ಲಿ ಅದು ಸ್ತಬ್ಧಗೊಂಡಿದೆ. ಆದರೆ ಸಾವಿನ ಕುರಿತಂತೆ ಕುಟುಂಬ ಸದಸ್ಯರು ಅನುಮಾನ ವ್ಯಕ್ತಪಡಿಸಿದ್ದಾರೆ.

ಹೈದರ್ ಕೊಲೆಗೆ ಬಿಬಿಎಂಪಿ ಚುನಾವಣೆ ಕಾರಣ?

ಬೆಂಗಳೂರು: ಶಾಸಕ ಹ್ಯಾರಿಸ್ ಆಪ್ತ ಕಾಂಗ್ರೆಸ್ ಮುಖಂಡ ಹೈದರ್ ಅಲಿ ಹಿಂದೆ ಒಂದೊಂದೇ ಮಿಸ್ಟರಿ ಗಳು ಕೇಳಿಬರುತ್ತಿದ್ದು, ರೌಡಿಶೀಟರ್ ಹೈದರ್ ಅಲಿ ಹತ್ಯೆಯ ಹಿಂದೆ ಕಾಣದ ಕೈಗಳು ಕೈಚಳಕ ತೋರಿಸಿವೆ.

ಬಿಬಿಎಂಪಿ ಚುನಾವಣೆಗಾಗಿ ಹೈದರ್ ಅಲಿಯ ಕೊಲೆ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ರೌಡಿಶೀಟರ್ ಹೈದರ್ ಅಲಿ ಹತ್ಯೆ ಹಿಂದೆ ಯೂತ್ ಕಾಂಗ್ರೆಸ್ ನಾಯಕನೊಬ್ಬನ ಕೈವಾಡವಿದೆ ಎನ್ನುವ ಗಂಭೀರ ಆರೋಪ ಕೇಳಿ ಬಂದಿದೆ. ಪ್ರಕರಣದ ಪ್ರಮುಖ ಆರೋಪಿ ನಾಜು ಜತೆ ಕೈ ಜೋಡಿಸಿ ಕೊಲೆ ಮಾಡಿಸ ಲಾಗಿದೆ ಎಂದು ಹೈದರ್ ಅಣ್ಣ ಸಲೀಂ ಮತ್ತು ಅತ್ತಿಗೆ ಆರೋಪಿಸಿದ್ದಾರೆ. ಅಲ್ಲದೆ ಮುಂದಿನ ದಿನಗಳಲ್ಲಿ ಬಿಬಿಎಂಪಿ ಚುನಾವಣೆ ಬರಲಿದ್ದು, ಹೈದರ್ ಮತ್ತು ಅಣ್ಣ ತಯಾರಿಸಿ ನಡೆಸಿದರು. ಏರಿಯಾದಲ್ಲಿ ಕೂಡ ಒಳ್ಳೆಯ ಹೆಸರಿತ್ತು. ತಮಗೆ ಟಿಕೆಟ್ ಸಿಗುತ್ತದೆ ಎಂದು ನಾಜು ಆಂಡ್ ಗ್ಯಾಂಗ್ ಮೂಲಕ ಕೊಲೆ ಮಾಡಿಸಿದ್ದಾರೆ ಎನ್ನಲಾಗಿದೆ.

2017ರಲ್ಲೂ ದಾಳಿ ನಡೆದಿತ್ತು: ಹೈದರ್ ಕೊಲೆ ಮಾಡಿ ಕುಟುಂಬವನ್ನು ಅನಾಥರನ್ನಾಗಿ ಮಾಡಿದರು ಎಂದು ಹೈದರ್ ಅಲಿ ಸಹೋದರ ಸಲೀಂ ಕಣ್ಣೀರು ಹಾಕಿದ್ದಾರೆ. 2017ರಲ್ಲಿ ಕೂಡ ಹೈದರ್ ಮೇಲೆ ದಾಳಿ ಆಗಿತ್ತು. ಈ ವೇಳೆ ಹೈದರ್ ಪ್ರಾಣಾಪಾಯದಿಂದ ಪಾರಾಗಿದ್ದ. ನಂತರ ಕಳೆದ ವರ್ಷ ರಂಜಾನ್ ವೇಳೆ ರಾಜಿ ಸಂಧಾನ ಮಾಡಲಾಗಿತ್ತು. ಸಂಧಾನದ ಬಳಿಕ ಒಂದೇ ತಟ್ಟೆಯಲ್ಲಿ ಊಟ ಮಾಡಿದ್ದರು. ಸ್ನೇಹವೆಂದು ಪ್ರಮಾಣ ಮಾಡಿ ಸ್ಕೆಚ್ ಹಾಕಿ ಕೊಲೆ ಮಾಡಿದ್ದಾರೆ ಎಂದು ಸಲೀಂ ಆರೋಪ. ಅಲ್ಲದೇ ಏರಿಯಾದಲ್ಲಿ ತಮ್ಮದೇ ಹವಾ ನಡೆಯಬೇಕು. ನಾವೇ ಎಲ್ಲಾ ಅಂತಾ ದರ್ಪ ಪ್ರದರ್ಶಿಸುತ್ತಿದ್ದು, ಹೈದರ್ ಅಲಿ ಬೆಳವಣಿಗೆ ಸಹಿಸದೆ ಈ ಹತ್ಯೆ ನಡೆದಿದೆ ಎಂದು ಸಲೀಂ ಆರೋಪಿಸಿದ್ದಾರೆ.

ಹಲ್ಲೆಯ ವಿಡಿಯೊ ವೈರಲ್: ಇನ್ನು ಯುವಕನಿಗೆ ಥಳಿಸುವ ವಿಡಿಯೋ ಒಂದು ವೈರಲ್ ಆಗ ತೊಡಗಿದೆ. ವಿಡಿಯೊದಲ್ಲಿ ಅದರಲ್ಲಿ ಅಬ್ಬಾಸ್ ಕೂಡ ಇದ್ದಾನೆ ಎನ್ನಲಾಗಿದೆ. ಯುವಕ ಬಿಟ್ಟು ಬಿಡುವಂತೆ ಕೈ ಮುಗಿದು ಅಂಗಲಾಚಿ ಬೇಡಿಕೊಂಡರೂ ಆರೋಪಿಗಳು ಪೈಪ್ ನಿಂದ ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಸದ್ಯ ಈ ವಿಡಿಯೋ ಎಲ್ಲೆಡೆ ವೈರಲ್ ಆಗಿದ್ದು, ಈ ಬಗ್ಗೆ ತನಿಖೆ ನಡೆಸುವಂತೆ ಪೊಲೀಸ್ ಕಮೀಷನರ್ ಬಿ. ದಯಾನಂದ್ ಸೂಚನೆ ನೀಡಿದ್ದಾರೆ.

ತನಿಖೆ ನಡೆಸಿ ವರದಿ ನೀಡುವಂತೆ ಕೇಂದ್ರ ವಿಭಾಗ ಡಿಸಿಪಿ ಶೇಖರ್ ಅವರಿಗೆ ಸೂಚಿಸಲಾಗಿದೆ. ಸದ್ಯ ಹೈದರ್ ಅಲಿ ಕೊಲೆ ಪ್ರಕರಣದಲ್ಲಿ ಪೊಲೀಸರು ಏಳು ಮಂದಿಯನ್ನು ಬಂಧಿಸಿ ವಿಚಾರಣೆ ನಡೆಸಿದ್ದಾರೆ. ಅದ್ರೆ ಈ ನಡುವೆ ಹೊಸ ಕಹಾನಿಗಳು ಬೆಳಕಿಗೆ ಬರ್ತಾ ಇದ್ದು, ಪೊಲೀಸರ ನಿಷ್ಪಕ್ಷಪಾತ ತನಿಖೆಯಿಂದಷ್ಟೆ ಸತ್ಯ ಹೊರ ಬರಬೇಕಿದೆ.

ಕೊಲೆ ನಡೆದಿದ್ದು ಎಲ್ಲಿ?: ಬೆಂಗಳೂರಿನ ರೆಸಿಡೆನ್ಸಿ ರಸ್ತೆಯ ಬಾರ್‌ನಲ್ಲಿ ತಡರಾತ್ರಿವರೆಗೆ ಪಾರ್ಟಿ ಮಾಡಿದ್ದ ಹೈದರ್ ಅಲಿ, ಸ್ನೇಹಿತನ ಜತೆ ಕಾರಿನಲ್ಲಿಆನೆಪಾಳ್ಯದ ತನ್ನ ಮನೆಗೆ ಹೋಗುತ್ತಿದ್ದಾಗ ನಾಲ್ಕೈದು ದುಷ್ಕರ್ಮಿಗಳು ದಾಳಿ ಮಾಡಿದ್ದರು.

ಮತ್ತೊಂದು ಕಾರಿನಲ್ಲಿ ಹಿಂಬಾಲಿಸಿ ಬಂದು ಫುಟ್ಬಾಲ್ ಸ್ಟೇಡಿಯಂ ಬಳಿ ಅಡ್ಡಗಟ್ಟಿದ್ದರು. ಆಗ ಕಾರಿನಿಂದ ಕೆಳಗಿಳಿದು ತಪ್ಪಿಸಿಕೊಳ್ಳಲು ಮುಂದಾದ ಹೈದರ್ ಅಲಿಯನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿ ಕೊಂದಿದ್ದರು. ಈ ವೇಳೆ ಹೈದರ್ ಅಲಿಯನ್ನು ರಕ್ಷಿಸಲು ಮುಂದಾದ ಆತನ ಸ್ನೇಹಿತನ ಮೇಲೂ ದುಷ್ಕರ್ಮಿಗಳು ಹಲ್ಲೆನಡೆಸಿದ್ದರು.

ಕ್ರೈಸ್ಟ್ ವಿವಿಯ ಹಳೆ ವಿದ್ಯಾರ್ಥಿಗಳನ್ನು ಶನಿವಾರ ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ, ಸಂಸದ ಫ್ರಾನ್ಸಿಸ್ ಜಾರ್ಜ್, ಸಚಿವ ಕೃಷ್ಣ ಭೈರೇಗೌಡ, ಸಂಸದ ಮಲ್ಲೇಶ್ ಬಾಬು, ಜಾರ್ಖಂಡ್ ಸಚಿವೆ ಶಿಲ್ಪಿ ನೇಹಾ ತಿರ್ಕೆ, ಕೇರಳ ಶಾಸಕ ಚಾಂಡಿ ಉಮನ್, ಸಂಸದ ಸಾಗರ್ ಈಶ್ವರ್ ಖಂಡ್ರೆ ಹಾಗು ಶಾಸಕ ದರ್ಶನ್ ಧ್ರುವನಾರಾಯಣ್ ಗೌರವಕ್ಕೆ ಪಾತ್ರರಾದರು. ವಿವಿ ಕುಲಪತಿ ಜೋಸ್ ಸಿಸಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜುಗ್ನು ಒಬೆರಾಯ್ ಇದ್ದರು.

ಲಿಟಲ್ ವಿಲ್ಲೆ ಪ್ರೀ ಸ್ಕೂಲ್ ವಾರ್ಷಿಕೋತ್ಸವ

ಬೆಂಗಳೂರು: ಸಿ ವಿ ರಾಮನ್ ನಗರದಲ್ಲಿರುವ ಲಿಟಲ್ ವಿಲ್ಲೆ ಪ್ರೀ ಸ್ಕೂಲ್‌ನಲ್ಲಿ ಅದ್ದೂರಿಯಾಗಿ ವಾರ್ಷಿಕೋತ್ಸವ ಆಚರಿಸಲಾಯಿತು. ಲಿಟಲ್ ವಿಲ್ಲೆ ದೇಶಾದ್ಯಂತ 150ಕ್ಕೂ ಹೆಚ್ಚು ಸ್ಥಳಗಳಲ್ಲಿ ಶಾಲೆಯನ್ನು ಹೊಂದಿರುವ ಅತಿ ದೊಡ್ಡ ಪ್ರೀ ಸ್ಕೂಲ್ ಸಮೂಹವಾಗಿದ್ದು, ವಾರ್ಷಿಕೋತ್ಸವ ಸಂದರ್ಭದಲ್ಲಿ ದೇಶದಲ್ಲಿ ಪ್ರೀ ಸ್ಕೂಲ್ ಶಿಕ್ಷಣಕ್ಕೆ ಹೆಚ್ಚುತ್ತಿರುವ ಮಹತ್ವವನ್ನು ಸಾರಲಾಯಿತು. 'ಒಂದು ಅದ್ಭುತ ಕುಟುಂಬ' ಎಂಬ ಘೋಷವಾಕ್ಯದಡಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಅತ್ಯಾಧುನಿಕ ವಿಭಕ್ತ ಕುಟುಂಬಗಳಲ್ಲಿ ಅಜ್ಜ-ಅಜ್ಜಿಯರ ಮಹತ್ವವನ್ನು ತಿಳಿಸಲಾಯಿತು. ಮಕ್ಕಳ ಪೋಷಕರು ಹಾಗೂ ಅಜ್ಜ-ಅಜ್ಜಿಯರನ್ನು ವೇದಿಕೆಯಲ್ಲಿ ಗೌರವಿಸಲಾಯಿತು. ಪ್ರಸ್ತುತ ಈ ಶಾಲೆಯಿಂದ ಹೊರಹೋಗುತ್ತಿರುವ ಮಕ್ಕಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲೆ ಆಶಾ ಅನಂತೇಶ್ ಅವರು ಮಾತನಾಡಿ, ಭಾರತದಲ್ಲಿ ಪ್ರೀ ಸ್ಕೂಲ್ ದಾಖಲಾತಿಯಲ್ಲಿ ಬಹಳಷ್ಟು ಏರಿಕೆ ಉಂಟಾಗಿದೆ. ಸುಮಾರು ಶೇ.80ರಷ್ಟು 3 ವರ್ಷದ ಮಕ್ಕಳು ಮತ್ತು ಸುಮಾರು ಶೇ.85ರಷ್ಟು 4 ವರ್ಷದ ಮಕ್ಕಳು ಪ್ರೀ ಸ್ಕೂಲ್‌ಗೆ ದಾಖಲಾಗಿದ್ದಾರೆ. 3ರಿಂದ 5 ವರ್ಷದ ಮಕ್ಕಳನ್ನು ಪ್ರೀ ಸ್ಕೂಲ್‌ಗೆ ದಾಖಲಾತಿ ಮಾಡುವುದರಲ್ಲಿ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಮುಂಚೂಣಿಯಲ್ಲಿವೆ ಎಂದು ತಿಳಿಸಿದರು.

ಗೋವಿಂದರಾಜನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ ಅವರು ಭಾನುವಾರ ವಿಜಯನಗರ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅತ್ತಿಗುಪ್ಪೆ, ನಾಗರಬಾವಿ ಹಾಗೂ ನಾಯಂಡನಹಳ್ಳಿ ವಾರ್ಡ್ ವ್ಯಾಪ್ತಿಯ ಗಂಗೊಂಡನಹಳ್ಳಿ ಪ್ರದೇಶದ ನಾಗರಿಕರ ಮನವಿ ಮೇರೆಗೆ ನೂತನ ಬಿಎಂಟಿಸಿ ಬಸ್ ಸಂಚಾರಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಪತ್ರಿಕಾ ಪ್ರಕಟಣೆ

ಕನಕಪುರ ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ 11 ಸಾಲಗಾರರ ಮತ್ತು 1 ಸಾಲಗಾರರಲ್ಲದ ಮತ ಕ್ಷೇತ್ರ ಸೇರಿ ಒಟ್ಟು 12 ಕ್ಷೇತ್ರಗಳಿಗೆ ಮಾರ್ಚ್25 ರಂದು ಪಿ.ಎಲ್.ಡಿ ಬ್ಯಾಂಕ್ ಆವರಣದಲ್ಲಿ ಬೆಳಗ್ಗೆ 10:00 ರಿಂದ ಮಧ್ಯಹ್ನ 3.00 ಗಂಟೆವರೆಗೆ ಚುನಾವಣೆ ನಡೆಯಲಿದೆ. ಮಾರ್ಚ್ 17, 18 ರಂದು ನಾಮಪತ್ರ ಸಲ್ಲಿಕೆಗೆ ಅವಕಾಶವಿದ್ದು, ಮಾರ್ಚ್ 19 ರಂದು ನಾಮ ಪತ್ರ ಪರಿಶೀಲನೆ, 20 ರಂದು ನಾಮಪತ್ರ ವಾಪಸ್ ಪಡೆಯಲು ನಿಗದಿ ಪಡಿಸಲಾಗಿದೆ ಎಂದು ಚುನಾಣಾಧಿಕಾರಿ ಆಶಾ.ಸಿ ತಿಳಿಸಿದ್ದಾರೆ.

ಪ್ರತಿ ಭಾನುವಾರ

ನಮೂನೆ–ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 14 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯಾ (ಸ್ವಯಂ ದಿವಾಳಿತನ ಪ್ರಕ್ರಿಯೆ) ನಿಯಂತ್ರಣಗಳು, 2017)

ಮಝೂನ ಟೆಕ್ನೋಬ್ರಿಡ್ಜ್ ಪ್ರೈವೇಟ್ ಲಿಮಿಟೆಡ್ ಇದರ ಸ್ಟೇಕ್‌ಹೋಲ್ಡರ್‌ಗಳ ಗಮನಕ್ಕೆ

1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಮಝೂನ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ವ್ಯಕ್ತಿಯ ಪ್ರಾರಂಭದ ದಿನ	ಡಿಸೆಂಬರ್ 05, 2017
3.	ಯಾವ ಅಥಾರಿಟಿಯ ಕೆಳಗೆ ಕಾರ್ಪೊರೇಟ್ ವ್ಯಕ್ತಿಯ ನೊಂದಣಿ ಆಗಿರುವುದು	ಕಂಪನಿಗಳ ಕಾಯಿದೆ, 2013 ರ ಅಡಿ ರಿಜಿಸ್ಟ್ರಾರ್ ಆಫ್ ಕಂಪನೀಸ್, ಬೆಂಗಳೂರು
4.	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಗುರುತು ಸಂಖ್ಯೆ/ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U93090KA2017PTC108434
5.	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ಅದರ ವಿಳಾಸ	ಎನ್ ಆರ್ ಟವರ್ಸ್ ನಂ. 14, 2ನೇ ಮಹಡಿ ಹಂತ 2 ಬಿಟಿಎಂ ಲೇಔಟ್, ಬೆಂಗಳೂರು, ಕರ್ನಾಟಕ, ಭಾರತ–560068
6.	ಕಾರ್ಪೊರೇಟ್ ವ್ಯಕ್ತಿಯ ಲಿಕ್ವಿಡೇಶನ್ ಆರಂಭದ ದಿನಾಂಕ	ಫೆಬ್ರವರಿ 27, 2025
7.	ಲಿಕ್ವಿಡೇಟರ್‌ರವರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸ	ವಿನೋದ್ ಸುಂದರ್ ರಾಮನ್ ಬಿ–703, ಅರ್ಬಿಂದ್ ಸ್ಕೈಲ್ಯಾಂಡ್ಸ್ ಅಪಾರ್ಟ್‌ಮೆಂಟ್ಸ್, ಶಿವನಹಳ್ಳಿ ಜಕ್ಕೂರು ಮುಖ್ಯ ರಸ್ತೆ, ಯಲಹಂಕ, ಬೆಂಗಳೂರು–560064 ಇ–ಮೇಲ್ ; vinod@vrconsulting.bia ದೂರವಾಣಿ ಸಂಖ್ಯೆ : +91–9845884410. ನೋಂದಣಿ ಸಂಖ್ಯೆ IBBI/IPA-002/IP-N00075 /2017-2018/10206
8.	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಮಾರ್ಚ್ 29, 2025

ಮಝೂನ ಟೆಕ್ನೋಬ್ರಿಡ್ಜ್ ಪ್ರೈವೇಟ್ ಲಿಮಿಟೆಡ್ ತನ್ನ ಸ್ವಯಂ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಫೆಬ್ರವರಿ 27, 2025ರಂದು ಪ್ರಾರಂಭಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.
ಮಝೂನ ಟೆಕ್ನೋಬ್ರಿಡ್ಜ್ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸಾಲದಾತರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಮಾರ್ಚ್ 29, 2025 ರಂದು ಅಥವಾ ಅದಕ್ಕೂ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 7ರಲ್ಲಿ ನೀಡಿರುವ ವಿಳಾಸಕ್ಕೆ ಸಲ್ಲಿಸಲು ಸೂಚಿಸಲಾಗಿದೆ.
ಹಣಕಾಸು ಸಾಲದಾತರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದೆಲ್ಲಾ ಸಾಲದಾತರು ತಮ್ಮ ಕ್ಲೈಮುಗಳನ್ನು ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾದರಿಯಲ್ಲಿ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.
ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು

ದಿನಾಂಕ: ಫೆಬ್ರವರಿ 03, 2025
ಸ್ಥಳ: ಬೆಂಗಳೂರು

ವಿನೋದ್ ಸುಂದರ್ ರಾಮನ್
ಲಿಕ್ವಿಡೇಟರ್, ಮಝೂನ ಟೆಕ್ನೋಬ್ರಿಡ್ಜ್ ಪ್ರೈವೇಟ್ ಲಿಮಿಟೆಡ್
ನೊಂ. ಸಂ. IBBI/IPA-002/IP-N00075/2017-2018/10206

ಯುವಜನೋತ್ಸವಕ್ಕೆ ಚಾಲನೆ

ರಾಜ್ಯ ಮಟ್ಟದ ಯುವಜನೋತ್ಸವದ ಉದ್ಘಾಟನಾ ಸಮಾರಂಭ.

ಬೆಂಗಳೂರು: ರಾಷ್ಟ್ರ ನಿರ್ಮಾಣದಲ್ಲಿ ಯುವಶಕ್ತಿಯ ಪ್ರತಿಭೆ ಮತ್ತು ಕೌಶಲ್ಯಗಳನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಪಾತ್ರದ ಬಗ್ಗೆ ಬಿಸಿಯು ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರು ನಗರ ವಿವಿ , ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಕರ್ನಾಟಕ ಸರಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಯುವಜನೋತ್ಸವ ಉದ್ಘಾಟಿಸಿ ಮಾತನಾಡಿ, ಯುವಜನರಲ್ಲಿ ಸಾಮಾಜಿಕ ಜಾಗೃತಿ ಮತ್ತು ಸೇವಾ ಮನೋಭಾವ ಮೂಡಿಸುವಲ್ಲಿ ಎನ್.ಎಸ್.ಎಸ್. ಮಹತ್ವಪೂರ್ಣ ಕೊಡುಗೆ ಸಲ್ಲಿಸುತ್ತಿದೆ. ಬೆಂಗಳೂರು ನಗರ ವಿವಿ ಎನ್‌ಎಸ್ ಎಸ್ ಘಟಕ ರಾಷ್ಟ್ರ ಮಟ್ಟದ ಮನ್ನಣೆ ಗಳಿಸಿರುವ ಬಗ್ಗೆ ಹೆಮ್ಮೆಯಿದೆ. ಸ್ವಚ್ಛತಾ ಅಭಿಯಾನ, ಮತದಾನ ಜಾಗೃತಿ, ಮಾದಕ ವ್ಯಸನ ನಿವಾರಣೆ, ಮಾನವೀಯ ಮೌಲ್ಯಾಧಾರಿತ ಸಂಸ್ಕೃತಿಯ ನಿರ್ಮಾಣದಲ್ಲಿ ಬಿಸಿಯು ಎನ್‌ಎಸ್‌ಎಸ್ ಘಟಕ ಮಂಚೂಣಿಯಲ್ಲಿದೆ ಎಂದರು.

ಕುಲಸಚಿವ ಟಿ.ಜವರೇಗೌಡರು ಮಾತನಾಡಿ, ಗ್ರಾಮಾಂತರ ಪ್ರದೇಶದಲ್ಲಿ ಶ್ರಮದಾನದ ಮೂಲಕ ನೈರ್ಮಲ್ಯ ಮತ್ತು ಆರೋಗ್ಯ ರಕ್ಷಣೆಯ ಕುರಿತು ಜನಜಾಗೃತಿ ಮೂಡಿಸುವಲ್ಲಿ ಎನ್‌ಎಸ್‌ಎಸ್ ಅತ್ಯುತ್ತಮ ಸೇವೆ ಸಲ್ಲಿಸುತ್ತಿದೆ ಎಂದು ಶ್ಲಾಘಿಸಿದರು. ಒಟ್ಟು ಐದು ದಿನಗಳ ಶಿಬಿರದಲ್ಲಿ ರಾಜ್ಯದ 13 ಜಿಲ್ಲೆಗಳಿಂದ ಸಂಯೋಜನಾಧಿಕಾರಿಗಳು ಮತ್ತು ಆಯ್ದ ಸ್ವಯಂಸೇವಕರು ಪಾಲ್ಗೊಂಡಿದ್ದಾರೆ. ಡೊಳ್ಳು ಕುಣಿತ, ಯಕ್ಷಗಾನ ವೇಷಧಾರಿಗಳು ಸಮಾರಂಭಕ್ಕೆ ವಿಶೇಷ ಮೆರುಗು ನೀಡಿದರು.

ವಿಶ್ವವಿದ್ಯಾಲಯದ ವಿತ್ತಾಧಿಕಾರಿ ಎಂ.ವಿ.ವಿಜಯಲಕ್ಷ್ಮಿ , ಸಿಂಡಿಕೇಟ್ ಸದಸ್ಯ ಪ್ರೊ. ಲಕ್ಷ್ಮಿನಾರಾಯಣ, ಎನ್‌ಎಸ್‌ಎಸ್ ಸಂಯೋಜಕ ಡಾ.ಎಚ್.ಜಿ.ಗೋವಿಂದೇಗೌಡ ಇದ್ದರು.

ಬನ್ನೇರುಘಟ್ಟದ ಜೈವಿಕ ಉದ್ಯಾನವನಕ್ಕೆ ಹಸಿರು ನ್ಯಾಯಪೀಠದ ಸದಸ್ಯರ ಭೇಟಿ

ಸ್ವಚ್ಛ ಪರಿಸರ ನಮ್ಮ ಜವಾಬ್ದಾರಿ

ಆನೇಕಲ್: ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟು ಕೊಳ್ಳಬೇಕಿರುವುದು ನಮ್ಮೆಲ್ಲರ ಜವಾಬ್ದಾರಿ ಯಾಗಿದೆ. ಹಸಿರು ಬೆಳೆಸುವುದು, ಉಳಿಸುವುದು, ಹಾಳಾಗುವುದನ್ನು ತಡೆಯುವು ದರ ಬಗ್ಗೆ ಗಮನ ಹರಿಸಿದರೇ ಮುಂದಿನ ಪೀಳಿಗೆಗೆ ಅದೇ ನಾವು ನೀಡಬಹುದಾದ ಬಹುದೊಡ್ಡ ಕೊಡುಗೆ ಎಂದು ರಾಷ್ಟ್ರೀಯ ಹಸಿರು ನ್ಯಾಯಪೀಠ ಸದಸ್ಯ ನ್ಯಾಯಾಧೀಶ ಡಾ. ಅಫ್ರೋಜ್ ಅಹಮದ್ ತಿಳಿಸಿದರು.

ಅವರು ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಭೇಟಿ ನೀಡಿ ಹಲಸಿನ ಸಸಿ ನೆಟ್ಟು ಮಾತನಾಡಿ, ಕೈಗಾರಿಕೆಗಳು, ಬಹುಮಹಡಿ ವಸತಿಗಳು, ಕಟ್ಟಡ ನಿರ್ಮಾಣ ತ್ಯಾಜ್ಯ ಮುಂತಾದವುಗಳು ಸಮೀಪದ ಕೆರೆಯ ಒಡಲನ್ನು ಸೇರಿ ನಮ್ಮ ಪರಿಸರ ಹಾಳಾಗುತ್ತಿದೆ. ಇದರ ಜೊತೆಗೆ ಪ್ಲಾಸ್ಟಿಕ್, ಹಾನಿಕಾರಕ ರಾಸಾಯನಿಕ ದ್ರವ ಹಾಗೂ ಮಣ್ಣಿನ ಜೊತೆಗೆ ಸಹಜವಾಗಿ ಕರಗಲಾರದ ಕೆಲ ವಸ್ತುಗಳು ಸೇರಿದಲ್ಲಿ ಇನ್ನಷ್ಟು ಮಾಲಿನ್ಯ ಉಂಟಾಗುತ್ತದೆ. ಮುಂದುವರಿಯುತ್ತಿರುವ ದೇಶವಾದ ಭಾರತದಲ್ಲಿ ಇವೆಲ್ಲವುಗಳನ್ನು ತಡೆಯುವುದು ಬಹುದೊಡ್ಡ ಸವಾಲಾಗಿದೆ. ಒಂದೂ ಜಾಗೃತಿ ಮೂಡಿಸುವುದು, ಎರಡನೆಯದು ಕಾನೂನು ಕಟ್ಟಲೆ ಜಾರಿ ಮೂಲಕ ತಡೆಯವುದು ಸಾಮಾಜಿಕ ಜವಾಬ್ದಾರಿಯಾಗಿದೆ ಎಂದರು.

ಬೆಂಗಳೂರಿನ ಕಾರ್ಯಕುಶಲತೆ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದ ಎನ್ ಜಿ ಟಿ ನ್ಯಾಯಾ ಧೀಶರು, ದೇಶದ ಇತರ ರಾಜ್ಯಗಳಿಗೆ ಇದೇ ಮಾದರಿ ಅನುಸರಿಸಲು ಸೂಚಿಸುವುದಾಗಿ ಹೇಳಿದರು.

ಬೆಂಗಳೂರಿನ ಕೆರೆಗಳ ಮಾಹಿತಿ: ಹಿರಿಯ ಪರಿಸರ ಅಧಿಕಾರಿ ಸಯ್ಯದ್ ಖ್ವಾಜಾ ಮಾತನಾಡಿ ಬೆಂಗಳೂರು ಜಿಲ್ಲೆಯ ಕೆರೆಗಳು, ಘನ ಹಾಗೂ ದ್ರವರೂಪದ ತ್ಯಾಜ್ಯಗಳು, ಎಸ್ ಟಿಪಿ ಘಟಕಗಳು ಅವುಗಳ ನಿರ್ವಹಣೆ, ತ್ಯಾಜ್ಯದ ಮರುಬಳಕೆ ಬಗ್ಗೆ ಮಾಹಿತಿ ನೀಡಿದರು. ಆಸ್ಪತ್ರೆ ತ್ಯಾಜ್ಯ, ಕೈಗಾರಿಕೆಗಳ ತ್ಯಾಜ್ಯ ಹಾಗೂ ನಿರ್ವಹಣೆ ಬಗ್ಗೆ ತಿಳಿಸಿ ಉಪಗ್ರಹ ಆಧಾರಿತ ತಂತ್ರಜ್ಞಾನ ಮೂಲಕ ಮಾನಿಟರಿಂಗ್ ಮಾಡುತ್ತಿರುವ ಬಗ್ಗೆ ವಿವರಿಸಿದರು.

ದಿನ ಪೂರ್ತಿ ನಡೆದ ಸಭೆಯಲ್ಲಿ ನಗರ ಜಿಲ್ಲಾಧಿಕಾರಿ ಡಾ. ಜಗದೀಶ್, ಜಂಟಿ ಆಯುಕ್ತ ಡಾ. ಹರೀಶ್, ಬಿ ಎನ್ ಪಿ ಯ ಡಿಸಿಎಫ್ ಕಾಜೋಲ್ ಪಾಟೀಲ್ ಪರಿಸರ ಅಧಿಕಾರಿಗಳಾದ ವಿಜಯ ಲಕ್ಷ್ಮೀ, ಮಧುಸೂದನ್, ನಗರ ಸಭೆ ಆಯುಕ್ತ ನರಸಿಂಹ ಮೂರ್ತಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಭೇಟಿ ನೀಡಿದ್ದ ಎನ್ ಜಿ ಟಿ ಸದಸ್ಯ ನ್ಯಾ. ಡಾ. ಅಫ್ರೋಜ್ ಅಹಮದ್ ಹಲಸಿನ ಸಸಿ ನೆಟ್ಟು ನೀರೆರೆದರು. ಡಿಸಿಎಫ್ ಕಾಜೋಲ್ ಪಾಟೀಲ್ ಮತ್ತು ಅಧಿಕಾರಿಗಳಿದ್ದರು.

- ಕೈಗಾರಿಕೆ, ಬಹುಮಹಡಿ ಕಟ್ಟಡಗಳ ತ್ಯಾಜ್ಯ ಕೆರೆಗಳ ಒಡಲಿಗೆ, ಪರಿಸರಕ್ಕೆ ಹಾನಿ
- ಪ್ಲಾಸ್ಟಿಕ್, ರಾಸಾಯನಿಕ ದ್ರವಗಳಿಂದಲೂ ತೀವ್ರ ಮಾಲಿನ್ಯ
- ಜನಜಾಗೃತಿ, ಕಾನೂನು ಮೂಲಕ ಮಾಲಿನ್ಯ ತಡೆಯುವುದು ಅನಿವಾರ್ಯ
- ರಾಷ್ಟ್ರೀಯ ಹಸಿರು ನ್ಯಾಯಪೀಠದ ಸದಸ್ಯ ನ್ಯಾ. ಅಫ್ರೋಜ್ ಅಹಮದ್

ಸಮಾಚಾರ ಸಣ್ಣದಲ್ಲ

ಆರ್‌ಒ ಘಟಕ ಶೀಘ್ರವೇ ಜಲಮಂಡಳಿ ಸುಪರ್ದಿಗೆ

ಬೆಂಗಳೂರು: ನಗರದಲ್ಲಿ ನೀರಿನ ಸಮಸ್ಯೆಯುಂಟಾಗದಂತೆ ಎಚ್ಚರ ವಹಿಸಲು ಸರಕಾರ ಮುಂದಾಗಿದ್ದು, ಪಾಲಿಕೆ ವ್ಯಾಪ್ತಿಯ ಶುದ್ಧ ನೀರಿನ ಘಟಕಗಳನ್ನು ಜಲಮಂಡಳಿಗೆ ಹಸ್ತಾಂತರಿಸುವಂತೆ ಸೂಚನೆ ನೀಡಿದ್ದಾರೆ. ನಗರದಲ್ಲಿ 600ಕ್ಕೂ ಅಧಿಕ ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಬಿಬಿಎಂಪಿ ಇದರ ನಿರ್ವಹಣೆ ಯನ್ನು ಮಾಡುತ್ತಿದ್ದಾರೆ. ಆದರೆ ಬೇಸಿಗೆ ಹಿನ್ನಲೆ ಈ ಘಟಕಗಳ ನಿರ್ವಹಣೆ ಹೊಣೆಯನ್ನು ಬೆಂಗಳೂರು ಜಲಮಂಡಳಿಗೆ ಹಸ್ತಾಂತರಿಸಲು ಡಿ.ಕೆ.ಶಿವ ಕುಮಾರ್ ಟಿಪ್ಪಣಿ ಮೂಲಕ ಸೂಚನೆ ನೀಡಿದ್ದಾರೆ. ಈ ಕುರಿತು ಡಿ. ಕೆ. ಶಿವಕುಮಾರ್, ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಇವರಿಗೆ ಟಿಪ್ಪಣಿ ಕಳಿಸಿದ್ದು, ನಗರದ ನಾಗರಿಕರಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಜವಾಬ್ದಾರಿ ಬೆಂಗಳೂರು ಜಲಮಂಡಳಿ ನಿರ್ವಹಣೆ ಮಾಡುತ್ತಿದೆ. ಪ್ರಸ್ತುತ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯನ್ನು ಬಿಬಿಎಂಪಿ ಮಾಡುತ್ತಿದೆ ಎಂದರು.

ಆರ್‌ಒ ಘಟಕಕ್ಕೆ ನೀರು ಪೂರೈಕೆ: ಒಂದು ವೇಳೆ ಕೊಳವೆಬಾವಿಗಳು ಬತ್ತಿಹೋದಲ್ಲಿ ಆರ್‌ಒ ಘಟಕಕ್ಕೆ ಬೇಕಾದ ನೀರನ್ನು ಜಲಮಂಡಳಿಯೇ ಪೂರೈಕೆ ಮಾಡಬೇಕು. ಈ ಹಿನ್ನೆಲೆ ಸಮನ್ವಯದ ಕೊರತೆಯುಂಟಾಗಿ ನಾಗರಿಕರಿಗೆ ಸಮಸ್ಯೆಯಾಗುವುದನ್ನು ತಪ್ಪಿಸಲು ನಗರಕ್ಕೆ ನೀರು ಸರಬರಾಜು ಮಾಡುತ್ತಿರುವ ಜಲಮಂಡಳಿಯವರೇ ಆರ್‌ಒ ಘಟಕ ನಿರ್ವಹಣೆ ಮಾಡುವುದು ಸೂಕ್ತವಾಗಿದೆ. ಈ ಹಿನ್ನಲೆಯಲ್ಲಿ ಕೂಡಲೇ ಆರ್‌ಒ ಪ್ಲಾಂಟ್‌ಗಳ ನಿರ್ವಹಣೆಯ ಸುಪರ್ದಿಯನ್ನು ಬಿಬಿಎಂಪಿಯು ಬೆಂಗಳೂರು ಜಲಮಂಡಳಿಗೆ ಹಸ್ತಾಂತರಿಸಲು ಸೂಕ್ತ ಆದೇಶವನ್ನು ಹೊರಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಸೂಚಿಸಿದೆ ಎಂದು ತಿಳಿಸಿದ್ದಾರೆ. ಕೆಲವು ದಿನಗಳ ಹಿಂದೆ ಬೆಂಗಳೂರು ನಗರ ಪ್ರದಕ್ಷಿಣೆ ಮಾಡಿದ್ದ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಕೆಲವು ಆರ್‌ಒ ಪ್ಲಾಂಟ್‌ಗಳು ಸರಿಯಾಗಿ ಕಾರ್ಯ ನಿರ್ವಹಣೆ ಮಾಡದಿರುವುದನ್ನು ಗಮನಿಸಿದ್ದು, ಪ್ಲಾಂಟ್ ಕಾರ್ಯ ನಿರ್ವಹಣೆ ಕುರಿತು ವರದಿ ನೀಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಈ ವರದಿ ಆಧರಿಸಿ ಈಗ ಪ್ಲಾಂಟ್‌ಗಳ ಉಸ್ತುವಾರಿಯನ್ನು ಜಲಮಂಡಳಿಗೆ ವಹಿಸಲು ಅವರು ತೀರ್ಮಾನಿಸಿ, ಟಿಪ್ಪಣಿ ಹೊರಡಿಸಿದ್ದಾರೆ. ಬಿಬಿಎಂಪಿಯ 8 ವಲಯಗಳಲ್ಲಿ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳಿವೆ. ಅವುಗಳಲ್ಲಿ ಎಷ್ಟು ಸ್ಥಗಿತವಾಗಿವೆ, ಎಷ್ಟು ದುರಸ್ತಿಯಾಗಬೇಕಿದೆ ಎಂದು ವಿವರವಾದ ವರದಿಯನ್ನು ನೀಡಲಾಗಿತ್ತು. ಈಗ ಬೇಸಿಗೆಯೂ ಆರಂಭವಾಗಿರುವ ಕಾರಣ ಇವುಗಳ ನಿರ್ವಹಣೆಯನ್ನು ಜಲಮಂಡಳಿಗೆ ಹಸ್ತಾಂತರ ಮಾಡಲಾಗುತ್ತದೆ.

ಶಿಕ್ಷಣ ಸಂಸ್ಥೆಗಳು ಜಾಗೃತಿ ಮೂಡಿಸಲಿ

'ಮದ್ಯ – ಮಾದಕ ವಸ್ತುಗಳ ದುಷ್ಪರಿಣಾಮ' ಕುರಿತ ಜಾಗೃತಿ ಜಾಥ ನಡೆಯಿತು.

ಬೆಂಗಳೂರು: ಸಮಾಜವನ್ನು ಗಂಭೀರವಾಗಿ ಕಾಡುತ್ತಿರುವ ಮಾದಕ ದ್ರವ್ಯ ವ್ಯಸನ ಪಿಡುಗಿನ ನಿವಾರಣೆಗೆ ವಿದ್ಯಾರ್ಥಿ–ಯುವಶಕ್ತಿ ಸಕ್ರಿಯವಾಗಿ ಶ್ರಮಿಸಬೇಕು. ಉತ್ತಮ ಸಮಾಜ ನಿರ್ಮಾಣದಲ್ಲಿ ಯುವಶಕ್ತಿ ಪಾತ್ರ ಅತಿಮುಖ್ಯವಾದದು ಎಂದು ಬೆಂಗಳೂರು ಕೇಂದ್ರ ವಿ.ವಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಅಭಿಪ್ರಾಯ ವ್ಯಕ್ತಪಡಿಸಿದರು. 'ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ದುಶ್ಚಟಗಳಿಗೆ ಬಲಿಯಾಗುತ್ತಿರುವ ಯುವ ಸಮೂಹಕ್ಕೆ ಶಿಕ್ಷಣ ಸಂಸ್ಥೆಗಳು ವ್ಯಾಪಕ ಜಾಗೃತಿ ಮೂಡಿಸಬೇಕಿದೆ ಎಂದು ಪ್ರತಿಪಾದಿಸಿದರು. ವಿಶೇಷ ಉಪನ್ಯಾಸ ನೀಡಿದ ಮನೋವೈದ್ಯ ಡಾ.ಕೆ.ಎಸ್. ಚೇತನ್ ಕುಮಾರ್ ಮಾದಕ ದ್ರವ್ಯ ವ್ಯಸನದಿಂದ ಮಾನಸಿಕ, ದೈಹಿಕ, ಸಾಮಾಜಿಕ ಮತ್ತು ಕಾನೂನಾತ್ಮಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕದಂತೆ ಎಚ್ಚರ ವಹಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡಾ. ರವೀಂದ್ರನಾಥ ಮೇಟಿ, ವಾರ್ತಾ ಇಲಾಖೆಯ ಉಪನಿರ್ದೇಶಕಿ ಪಲ್ಲವಿ ಹೊನ್ನಾಪುರ ಭಾಗವಹಿಸಿದ್ದರು.

{ ಎಂ.ಬಿ.ಪಾಟೀಲ್ } ಕೈಗಾರಿಕಾ ಸಚಿವ

ಬೆಂಗಳೂರಿನ ಹೆಬ್ಬಾಳದಲ್ಲಿರುವ 45 ಎಕರೆ ಪ್ರದೇಶವನ್ನು ಬಹುಮಾದರಿ ಸಾರಿಗೆ ಹಬ್ ನಿರ್ಮಾಣಕ್ಕಾಗಿ ಬೆಂಗಳೂರು ಮೆಟ್ರೋ ರೈಲು ನಿಗಮಕ್ಕೆ ಹಸ್ತಾಂತರಿಸಲು ರಾಜ್ಯ ಸರಕಾರ ಬದ್ಧವಾಗಿದೆ. ಈ ಸಂಬಂಧ ಇರುವ ಕಾನೂನು ತೊಡಕುಗಳನ್ನು ನಿವಾರಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ರಜಾದಿನವಾದ ಭಾನುವಾರ ವಿಧಾನಸೌಧದ ಆವರಣದಲ್ಲಿ ನಡೆದ ಪುಸ್ತಕ ಮೇಳಕ್ಕೆ ಭಾರಿ ಸಂಖ್ಯೆಯಲ್ಲಿ ಪುಸ್ತಕ ಪ್ರೇಮಿಗಳು ಭೇಟಿ ನೀಡಿದ್ದರು. ▸▸ ಚಿತ್ರ: ಸುಧಾಕರ್ ದೇವರಾಜ್

ಅಕ್ಷರ ಜಾತ್ರೆಗೆ ಜನಸಾಗರ: ವಿಧಾನಸೌಧ ನೋಡಲು ಮುಗಿಬಿದ್ದ ಸಾರ್ವಜನಿಕರು

ಪುಸ್ತಕ ಮೇಳಕ್ಕೆ ಇಂದು ತೆರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇದೇ ಮೊದಲ ಬಾರಿಗೆ ವಿಧಾನ ಸೌಧದ ಆವರಣದಲ್ಲಿ ಆಯೋಜಿಸಿದ್ದ ಪುಸ್ತಕದ ಮೇಳ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದ್ದು, ಸಾರ್ವಜನಿಕರ ವೀಕ್ಷಣೆಗೆ ಭಾನುವಾರವೇ ಕೊನೆಯ ದಿನವಾಗಿದ್ದರೂ ಸೋಮವಾರ ಅಧಿಕೃತವಾಗಿ ತೆರೆಬೀಳಲಿದೆ.

ಸೋಮವಾರದಿಂದ ಜಂಟಿ ಅಧಿವೇಶನ ಆರಂಭವಾಗುತ್ತಿರುವುದರಿಂದ ಪುಸ್ತಕ ಮೇಳದಲ್ಲಿ ಸಾರ್ವಜನಿಕರು ಸೋಮವಾರ ಭಾಗವಹಿಸಲು ಅವಕಾಶ ನೀಡಿಲ್ಲ. ಆದರೆ ಶಾಸಕರು, ಹಿರಿಯ ಅಧಿಕಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ವಾರಾಂತ್ಯ ದಂದೇ ಶಕ್ತಿಸೌಧವನ್ನು ಸುತ್ತು ಹಾಕಲು ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗದಿಂದ ಸಾಹಿತ್ಯಾಸಕ್ತರು ಆಗಮಿಸಿ ವಿಧಾನಸೌಧವನ್ನು ಕಣ್ತುಂಬಿಕೊಂಡರು.

ವಿಶ್ವವಾಣಿ ಮಳಿಗೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭೇಟಿ ನೀಡಿದ್ದರು.

ಇಂದು ಶಾಸಕರಿಗೆ ಮಾತ್ರ ಅವಕಾಶ

ಸಚಿವಾಲಯದಿಂದ ಆಯೋಜನೆಗೊಂಡಿರುವ ಪುಸ್ತಕ ಮೇಳೆ ಸೋಮವಾರ ಅಂತ್ಯವಾಗಲಿದೆ. ಆದರೆ ಸಾರ್ವಜನಿಕರ ಪ್ರವೇಶಕ್ಕೆ ಭಾನುವಾರವೇ ಕೊನೆಯ ದಿನವಾಗಿದ್ದರಿಂದ ಭಾರಿ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದರು. ಸೋಮವಾರ ಜಂಟಿ ಅಧಿವೇಶನದ ಬಳಿಕ ವಿಧಾನಸಭೆ ಹಾಗೂ ಪರಿಷತ್ ಶಾಸಕರು ಪುಸ್ತಕ ಮಳಿಗೆಗಳಿಗೆ ಭೇಟಿ ನೀಡಿ, ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ ಪುಸ್ತಕ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಸೋಮವಾರ ಕೇವಲ ಶಾಸಕರು, ಸಚಿವರು ಹಾಗೂ ಅಧಿಕಾರಿಗಳು ಮಾತ್ರ ಪುಸ್ತಕ ಮೇಳದಲ್ಲಿ ಭಾಗವಹಿಸಲಿದ್ದಾರೆ.

ಪುಸ್ತಕ ಮೇಳದ ಹಿನ್ನೆಲೆಯಲ್ಲಿ ವಿಧಾನಸೌಧದ ಪಕ್ಷಿನೋಟ.

ರಜೆದಿನವಾಗಿದ್ದರಿಂದ ಕುಟುಂಬ ಸಮೇತರಾಗಿ ಅನೇಕರು ಆಗಮಿಸಿದ್ದರು. ಕೊನೆಯ ದಿನದಂದು ವಿಧಾನಸೌಧದೊಳಗೆ ಹಾಗೂ ವಿಧಾನಸಭೆಯ ಪ್ರವೇಶಕ್ಕೆ ಸಾರ್ವಜನಿಕರಿಗೆ ಮುಕ್ತ ಅವಕಾಶ ನೀಡಿದ್ದರಿಂದ ಸಾವಿರಾರು ಸಂಖ್ಯೆಯಲ್ಲಿ ಜನರು ವಿಧಾನ ಸೌಧ ಪ್ರವೇಶಿಸಲು ಮುಗಿಬಿದ್ದರು. ಪುಸ್ತಕ ಪ್ರಿಯರು ಪುಸ್ತಕ ಮೇಳದಲ್ಲಿ ತಮಗೆ ಬೇಕಾದ ಪುಸ್ತಕಗಳನ್ನು ಖರೀದಿಸಿ ಖುಷಿಪಟ್ಟರೆ, ಕುಟುಂಬಸ್ಥರು, ಪ್ರವಾಸಿಗರು ಇದೇ ಮೊದಲ ಬಾರಿಗೆ ಅಮೃತ ಶಿಲೆಯಲ್ಲಿ ಕಟ್ಟಿದ ವಿಧಾನಸೌಧದ ಸೌಂದರ್ಯವನ್ನು ಹತ್ತಿರದಿಂದ ಕಂಡು ಸಂಭ್ರಮಿಸಿದರು. ಯುವ ಜೋಡಿಗಳು ಸೆಲ್ಫಿ ತೆಗೆದುಕೊಂಡು ಖುಷಿಪಟ್ಟರು. ಆದರೆ ನಿರೀಕ್ಷೆಗೂ ಮೀರಿದ ಜನಸಾಗರವನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿ ಹರಸಾಹಸಪಟ್ಟರು.

ಸೆಲ್ಫಿ ಪಾಯಿಂಟ್ ಆದ ಶಕ್ತಿಸೌಧ: ಅನೇಕರು ಪುಸ್ತಕ ಖರೀದಿಗಿಂತ ಹೆಚ್ಚಾಗಿ ವಿಧಾನಸೌಧವನ್ನು ಸುತ್ತು ಹಾಕಲು ಆಗಮಿಸಿದ್ದರು. ಅನೇಕರು ವಿಧಾನಸೌಧ ಆವರಣದ ಮೂಲೆ ಮೂಲೆಯಲ್ಲಿ, ವಿವಿಧ ಪುತ್ಥಳಿಗಳ ಮುಂದೆ ನಿಂತು ಸೆಲ್ಫಿ ತೆಗೆಸಿಕೊಳ್ಳುವುದು ಸಾಮಾನ್ಯವಾಗಿತ್ತು. ಇದರೊಂದಿಗೆ ಅನೇಕರು ಲೇಖಕರು ಪುಸ್ತಕ ಮೇಳದಲ್ಲಿ ಆಗಮಿಸಿದ್ದರಿಂದ ಸಾರ್ವಜನಿಕರು ಪುಸ್ತಕ ಖರೀದಿಸಿದ ಬಳಿಕ, ತಮ್ಮ ನೆಚ್ಚಿನ ಲೇಖಕರೊಂದಿಗೆ ಸೆಲ್ಫಿ ತೆಗೆಸಿಕೊಂಡು ಸಂಭ್ರಮಿಸಿದರು.

ಭಾನುವಾರ ಬೆಳಗ್ಗೆಯಿಂದಲೇ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡಿದ ಸಾಹಿತಾಸಕ್ತರು, ತಮ್ಮ ನೆಚ್ಚಿನ ಪುಸ್ತಕಗಳನ್ನು ನೋಡುವುದರಲ್ಲಿ, ಖರೀದಿಸುವಲ್ಲಿ ಮಗ್ನರಾಗಿದ್ದರು. ಸುಮಾರು 150ಕ್ಕೂ ಹೆಚ್ಚು ಮಳಿಗೆಗಳಿದ್ದು, ಎಲ್ಲ ಬಗೆಯ ಪುಸ್ತಕಗಳ ಸಂಗ್ರಹವಿರುವುದರಿಂದ ತಮಗಿಷ್ಟದ ಪುಸ್ತಕವನ್ನು ಖರೀದಿಸುವಲ್ಲಿ ಅನೇಕರು ಮಗ್ನರಾಗಿದ್ದರು. ಬೆಳಗ್ಗೆಯಿಂದಲೇ ಬಿಸಿಲಿನ ಝಳ ಜೋರಾಗಿದ್ದರು ಭಾನುವಾರವೇ ಅಂತಿಮ ದಿನವಾಗಿದ್ದರಿಂದ ಮಧ್ಯಾಹ್ನದ ವೇಳೆಗೆ ಜನರ ಸಂಖ್ಯೆ ಹೆಚ್ಚಳವಾಗುತ್ತಲೇ ಹೋಯಿತು. ಅದರಲ್ಲಿಯೂ ವಿಧಾನಸಭೆ ಪ್ರವೇಶ ನೀಡುವ ವಿಷಯ ತಿಳಿದ ಬಳಿಕ ಇನ್ನಷ್ಟು ಮಂದಿ ವಿಧಾನ ಸೌಧದತ್ತ ಮುಖ ಮಾಡಿದರು. ನಾಲ್ಕು ಗೇಟ್‌ಗಳಲ್ಲಿ ಸಾರ್ವಜನಿಕರಿಗೆ ಪ್ರವೇಶಕ್ಕೆ ಅವಕಾಶ ನೀಡಿದ್ದರಿಂದ ಭಾರಿ ಬಿಗಿಭದ್ರತೆ ಏರ್ಪಡಿಸಲಾಗಿತ್ತು.

ವಿಶ್ವವಾಣಿ ಮಳಿಗೆಯಲ್ಲಿ ಪುಸ್ತಕ ಪ್ರೇಮಿಯಿಂದ ವಿಶ್ವೇಶ್ವರ ಭಟ್ ಅವರ ಕೃತಿ ಖರೀದಿ.

ಪುಸ್ತಕ ಮಳಿಗೆಗಳಿಗೆ ರಾಜ್ಯಪಾಲರ ಭೇಟಿ

ರಾಜ್ಯಪಾಲರ ಥಾವರ್‌ಚಂದ್ ಗೆಹ್ಲೋಟ್ ಅವರು ಸೋಮವಾರ ಪುಸ್ತಕ ಮೇಳಕ್ಕೆ ಭೇಟಿ ನೀಡಲಿದ್ದಾರೆ ಎನ್ನಲಾಗಿತ್ತು. ಆದರೆ ಭಾನುವಾರ ಸಂಜೆಯೇ ವಿಧಾನಸೌಧ ಆವರಣಕ್ಕೆ ಆಗಮಿಸಿದ ಅವರು ವಿವಿಧ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡಿ ಪುಸ್ತಕಗಳನ್ನು ವೀಕ್ಷಿಸಿದರು. ಬಹುತೇಕ ಕನ್ನಡ ಪುಸ್ತಕಗಳೇ ಇದಿದ್ದರಿಂದ ಯಾವೆಲ್ಲ ಪುಸ್ತಕಗಳಿವೆ ಎನ್ನುವ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದರು. ರಾಜ್ಯಪಾಲರಿಗೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹಾಗೂ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಸಾಥ್ ನೀಡಿದರು.

ಡಿಜಿಪಿ ಅಲೋಕ್ ಮೋಹನ್ ಅಧಿಕಾರಾವಧಿ ವಿಸ್ತರಣೆ?

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರ ಅಧಿಕಾರಾವಧಿ 4 ತಿಂಗಳು ವಿಸ್ತರಣೆಯಾಗಲಿದೆ ಎಂಬ ವಿಷಯ ಪೊಲೀಸ್ ಇಲಾಖೆ ಯಲ್ಲಿ ಸಂಚಲನ ಮೂಡಿಸಿದೆ.

ಇದೇ ವರ್ಷ ಏ.30ಕ್ಕೆ ಅಲೋಕ್ ಮೋಹನ್ ಸೇವಾ ನಿವೃತ್ತಿ ಹೊಂದಬೇಕಿದೆ. ಆದರೆ ಸುಪ್ರೀಂ ಕೋರ್ಟ್ ಆದೇಶದನ್ವಯ ಅವರ ಅಧಿಕಾರಾವಧಿ ಆಗಸ್ಟ್ ವರೆಗೆ ವಿಸ್ತರಣೆಯಾಗಲಿದೆ ಎಂಬ ಚರ್ಚೆ ನಡೆದಿದೆ. ಈ ಸಂಬಂಧ ಕೇಂದ್ರ ಗೃಹ ಇಲಾಖೆಗೆ ರಾಜ್ಯ ಸರಕಾರದಿಂದ ಶಿಫಾರಸು ಮಾಡಿದ್ದು, ಕೇಂದ್ರ ಸಮ್ಮತಿಸಿದರೆ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮೊದಲ ಬಾರಿಗೆ ಡಿಜಿ–ಐಜಿಪಿ ಅಧಿಕಾರಾವಧಿ ವಿಸ್ತರಣೆಯಾ ದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ನಿವೃತ್ತಿಗೂ 3 ತಿಂಗಳ ಮುನ್ನ ಗೃಹ ಇಲಾಖೆಗೆ ಸಲ್ಲಿಕೆಯಾದ ಐಪಿಎಸ್ ಅಧಿಕಾರಿಗಳ ಹೆಸರಿನ ಪಟ್ಟಿಯಲ್ಲಿ ಅಲೋಕ್ ಮೋಹನ್ ಅವರ ಹೆಸರು ಉಲ್ಲೇಖವಾಗಿಲ್ಲ ಎಂದು ಮೂಲಗಳು ಹೇಳಿವೆ.

ಏಕೆ ವಿಸ್ತರಣೆ?

ಆಡಳಿತಾತ್ಮಕ ದೃಷ್ಟಿಯಿಂದ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಕನಿಷ್ಠ 2 ವರ್ಷಗಳ ಅಧಿಕಾರಾವಧಿ ಹೊಂದಿರಬೇಕು ಎಂದು ಸುಪ್ರೀಂ ಆದೇಶವಿದೆ. ಈ ಆದೇಶ ಮುಂದಿಟ್ಟು ತಮಗೆ 4 ತಿಂಗಳು ಅಧಿಕಾರಾವಧಿ ವಿಸ್ತರಿಸುವಂತೆ ರಾಜ್ಯ ಸರಕಾರಕ್ಕೆ ಅಲೋಕ್ ಮೋಹನ್ ಕೋರಿಕೆ ಸಲ್ಲಿಸಿದ್ದಾರೆ. ಈ ಮನವಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಪರಮೇಶ್ವರ್ ಸ್ಪಂದಿಸಿದ್ದಾರೆ ಎಂದು ತಿಳಿದು ಬಂದಿದೆ. ಕೇಂದ್ರ ತನಿಖಾ ದಳ ನಿರ್ದೇಶಕರಾಗಿ ಪ್ರವೀಣ್ ಸೂದ್ ಅವರು ತೆರಳಿದ ಬಳಿಕ ಅವರಿಂದ ತೆರವಾದ ಡಿಜಿಪಿ ಹುದ್ದೆಗೆ 2023ರ ಮೇ.23ರಂದು ಸೇವಾ ಹಿರಿತನದ ಆಧಾರದ ಮೇರೆಗೆ ಅಲೋಕ್ ಮೋಹನ್ ನೇಮಕ ಗೊಂಡರು. ಆದರೆ ಮೊದಲು ಪ್ರಭಾರ ಡಿಜಿಪಿಯಾಗಿ ಕಾರ್ಯನಿರ್ವಹಿಸಿದ್ದ ಅವರಿಗೆ 4 ತಿಂಗಳ ಬಳಿಕ ಹುದ್ದೆ ಕಾಯಂಗೊಂಡಿತು. ಈಗ 4 ತಿಂಗಳು ಪ್ರಭಾರ ಅವಧಿಯನ್ನು ಪರಿಗಣಿಸದೆ ಕಾಯಂ ಅವಧಿ ಮಾತ್ರ ಪರಿಗಣಿಸುವಂತೆ ಡಿಜಿಪಿ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ಏಪ್ರಿಲ್‌ನಲ್ಲಿ ನಿವೃತ್ತಿಯಾಗಬೇಕಿದ್ದ ಅವರಿಗೆ ಬೋನಸ್ ಆಗಿ 4 ತಿಂಗಳು ಅಧಿಕಾರ ಸಿಗುವ ಸಾಧ್ಯತೆಗಳಿವೆ.

ಬೆಂವಿವಿ ವಿದ್ಯಾರ್ಥಿಗಳ ಅಭಿವೃದ್ಧಿಗೆ ಐಸಿಎಸ್‌ಐ ಸಹಕಾರ

ಬೆಂಗಳೂರು: ಬೆಂಗಳೂರು ವಿವಿ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ICSI) – ಬೆಂಗಳೂರು ಚಾಪ್ಟರ್ ನಡುವೆ ಶಿಕ್ಷಣ ಸಹಭಾಗಿತ್ವ ಕುರಿತು ಮಹತ್ವದ ಸಭೆ ನಡೆಸಲಾಗಿದೆ.

2024ರ ನವೆಂಬರ್‌ನಲ್ಲಿ ಎರಡು ಸಂಸ್ಥೆಗಳು ಒಡಂಬಡಿಕೆಗೆ ಸಹಿ ಹಾಕಿದ್ದು, ಒಡಂಬಡಿಕೆಯ ಭಾಗವಾಗಿ ಐಸಿಎಸ್‌ಐ ರಾಷ್ಟ್ರೀಯ ಅಧ್ಯಕ್ಷ ಸಿ.ಎಸ್. ಧನಂಜಯ್ ಶುಕ್ಲಾ ತಂಡ ಬೆಂಗಳೂರು ವಿವಿಗೆ ಭೇಟಿ ನೀಡಿ ಕುಲಸಚಿವ ಶೇಕ್ ಲತೀಫ್ ನೇತೃತ್ವದಲ್ಲಿ ಸಭೆ ನಡೆಸಿದರು. ಸಭೆಯಲ್ಲಿ ಒಪ್ಪಂದದ ಭಾಗವಾಗಿ ಪರಸ್ಪರ ಸಹಕಾರ, ಕೈಗಾರಿಕಾ ಪಾಲುದಾರಿಕೆ ಹೊಂದುವ ಕುರಿತಂತೆ ವಿಸ್ತೃತ ಚರ್ಚೆ ನಡೆಸಲಾಗಿದೆ. ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರ ವಿನಿಮಯ, ಜಂಟಿ ಕಾರ್ಯಾಗಾರಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳ ಆಯೋಜನೆ, ವಿಶೇಷ ತರಬೇತಿ ಕಾರ್ಯಕ್ರಮ, ನಿಯತಕಾಲಿಕೆ ಮತ್ತು ಪ್ರಬಂಧಗಳ ಪ್ರಕಟಣೆ, ಪಠ್ಯ ಸಾಮಗ್ರಿಗಳ ಮತ್ತು ಸಂಶೋಧನೆ ಪ್ರಕಟಣೆಗಳ ವಿನಿಮಯ, ಗುಣಮಟ್ಟ ಮತ್ತು ಸಮಗ್ರ ಶಿಕ್ಷಣದ ಅಭಿವೃದ್ಧಿಗೆ ಎರಡು ಸಂಸ್ಥೆಗಳು ಒಟ್ಟಾಗಿ ಶ್ರಮಿಸುವ ಕುರಿತು ಚರ್ಚಿಸಲಾಯಿತು. ಈ ಒಪ್ಪಂದದಿಂದ ಬೆಂಗಳೂರು ವಿವಿ ವ್ಯಾಪ್ತಿಯ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಐಸಿಎಸ್‌ಐಗೆ ಸಾಕಷ್ಟು ಅನುಕೂಲವಾಗಲಿದೆ.

ಬೆಂಗಳೂರು ವಿವಿಗೆ ಐಸಿಎಸ್‌ಐ ರಾಷ್ಟ್ರೀಯ ಅಧ್ಯಕ್ಷ ಧನಂಜಯ್ ಶುಕ್ಲಾ ಭೇಟಿ ನೀಡಿದ ಸಂದರ್ಭ.

ಶೈಕ್ಷಣಿಕವಾಗಿ ಸಹಕಾರಿ: ಕುಲಸಚಿವ ಶೇಕ್ ಲತೀಫ್ ಮಾತನಾಡಿ,ದೇಶದ ಪ್ರತಿಷ್ಠಿತ ಸಂಸ್ಥೆಯಾಗಿರುವ ಐಸಿಎಸ್‌ಐ ಸಂಸ್ಥೆ ಜೊತೆಗಿನ ಒಡಂಬಡಿಕೆಯಿಂದ ಬೆಂಗಳೂರು ವಿವಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಸಹಾಯಕವಾಗಲಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಸಿಎಸ್ ಕೋರ್ಸ್ ಬಗ್ಗೆ ಮಾಹಿತಿ ನೀಡಿ ಸೂಕ್ತ ತರಬೇತಿ ನೀಡಲಾಗುವುದು. ಒಡಂಬಡಿಕೆ ಭಾಗವಾಗಿ ವಿಶ್ವವಿದ್ಯಾಲಯ ಆ ಕಾರ್ಯದಲ್ಲಿ ತೊಡಗಿದ್ದು ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರಿಗೆ ಸೂಕ್ತ ತರಬೇತಿ ನೀಡಲಾಗುತ್ತದೆ ಎಂದರು. ಈ ವೇಳೆ ಕುಲಸಚಿವರು ಮೌಲ್ಯಮಾಪನ ಶ್ರೀನಿವಾಸ್ ಸಿ, ಡೀನ್‌ರಾದ ಡಾ.ನಿರ್ಮಲ ಕೆ, ಪ್ರೊ.ಅಶೋಕ್ ಡಿ ಹಂಜಗಿ, ಪ್ರೊ.ವಿ.ಸುದೇಶ್, ಡಾ.ಸರ್ವಮಂಗಳ,ಡಾ.ಮೊಹಮ್ಮದ್ ಫಾರೂಕ್ ಪಾಷಾ, ಸಿಎಸ್ ಪವನ್ ಜಿ ಚಂದಾಕ್, ಸಿಎಸ್ ಸಿ ದ್ವಾರಕನಾಥ್ ಇದ್ದರು.

ಆಸ್ತಿ ತೆರಿಗೆ ಬಾಕಿ ಉಳಿಸುವವರ ಆಸ್ತಿ ಮುಟ್ಟುಗೋಲು

ಬೆಂಗಳೂರಿನ ಮೂರು ಸಾವಿರ ಆಸ್ತಿದಾರರಿಗೆ ಬಿಬಿಎಂಪಿ ಶಾಕ್

ಬೆಂಗಳೂರು: ನಗರದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಮೊದಲ ಹಂತದಲ್ಲಿ ಬಿಸಿ ಮುಟ್ಟಿಸಿದ ಪಾಲಿಕೆಯು ಈಗ ಎರಡನೇ ಹಂತದಲ್ಲಿ ಕಾರ್ಯಾಚರಣೆಯನ್ನು ಆರಂಭಿಸಿದೆ.

ಪಾಲಿಕೆಯು 2023–2024ನೇ ಸಾಲಿನಿಂದ ಆರ್ಥಿಕ ವಹಿವಾಟಿನಲ್ಲಿ ಹಲವು ಸುಧಾರಣೆಗಳನ್ನು ತರುತ್ತಿದ್ದು, ಮುಖ್ಯವಾಗಿ ಆದಾಯ ಸಂಗ್ರಹದ ವಿಚಾರದಲ್ಲಿ ತೆರಿಗೆ ಸಂಗ್ರಹದಲ್ಲಿ ಪರಿಣಾಮಕಾರಿ ವಿಧಾನಗಳನ್ನು ಅನುಸರಿಸುತ್ತಿದೆ. ಇದೀಗ ಆಸ್ತಿ ಮುಟ್ಟುಗೋಲು ಹಾಗೂ ಆಸ್ತಿ ಹರಾಜಿನಂತಹ ಗಂಭೀರ ಕ್ರಮಗಳ ಬಳಿಕ ಇದೀಗ ಕಠಿಣ ಕ್ರಮಕ್ಕೆ ಮುಂದಾಗಿದ್ದು, ಆಸ್ತಿ ಹರಾಜಿನ ಎರಡನೇ ಹಂತವನ್ನು ಬಿಬಿಎಂಪಿ ಶುರು ಮಾಡಿದೆ. ಮೊದಲ ಹಂತದಲ್ಲಿ 608 ಆಸ್ತಿಗಳನ್ನು ಹರಾಜು ಮಾಡುವುದಾಗಿ ಬಿಬಿಎಂಪಿ ಹೇಳಿದ್ದು, ಎಂಟು ವಲಯಗಳಲ್ಲಿ ದೀರ್ಘ ಅವಧಿಯಿಂದ ಆಸ್ತಿ ಬಾಕಿ ಉಳಿಸಿಕೊಂಡಿರುವ ಆಸ್ತಿಗಳನ್ನು ಪಟ್ಟಿ ಮಾಡಿತ್ತು. ಈ ಆಸ್ತಿದಾರರು ಆಸ್ತಿ ತೆರಿಗೆ ಪಾವತಿ ಮಾಡದೆ ಇದ್ದರೆ, ಆಸ್ತಿಯನ್ನೇ ಹರಾಜು ಹಾಕು ವುದಾಗಿ ಹೇಳಲಾಗಿತ್ತು. ಈ ರೀತಿ ಹೇಳಿದ ಮೇಲೆ 555 ಜನ ಆಸ್ತಿ ತೆರಿಗೆ ಪಾವತಿಸಿದ್ದಾರೆ. ಇದರಿಂದ ಬರೋಬ್ಬರಿ 18 ಕೋಟಿ ರು. ಸಂಗ್ರಹ ವಾಗಿದೆ. ಆದರೆ, ಆಸ್ತಿ ತೆರಿಗೆ ಇನ್ನೂ ಬಾಕಿ ಉಳಿಸಿಕೊಂಡವರಿಗೆ ಬಿಸಿ ಮುಟ್ಟಿಸಲು ಬಿಬಿಎಂಪಿಯು ಮುಂದಿನ ಹಂತಕ್ಕೆ ಮುಂದುವರಿಯಲು ನಿರ್ಧರಿಸಿದೆ. ಈ ರೀತಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರು ಕಾಲ ಮಿತಿ ಯಲ್ಲಿ ಆಸ್ತಿ ತೆರಿಗೆ ಪಾವತಿ ಮಾಡದೆ ಇದ್ದರೆ. ಹಲವು ಮಾದರಿಯ ದಂಡವನ್ನು ವಿಧಿಸಬೇಕಾ ಗುತ್ತದೆ ಎನ್ನುವ ಎಚ್ಚರಿಕೆಯನ್ನು ಸಹ ಕೊಡಲಾಗಿದೆ.

ಮೂರು ಸಾವಿರ ಆಸ್ತಿದಾರರಿಗೆ ನಡುಕ

ಪಾಲಿಕೆಯ ಹೊಸ ಕ್ರಮವು ಬೆಂಗಳೂರಿನ ಮೂರು ಸಾವಿರ ಆಸ್ತಿದಾರರಲ್ಲಿ ನಡುಕವನ್ನುಂಟು ಮಾಡಿದೆ. ನಗರದಲ್ಲಿ ಮೂರು ಸಾವಿರ ಆಸ್ತಿದಾರರು ಹಲವು ವರ್ಷಗಳಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದು, ಇದೀಗ ಆಸ್ತಿಯನ್ನೇ ಕಳೆದುಕೊಳ್ಳುವ ಆತಂಕ ಎದುರಾಗಿದೆ. ಹಲವು ವರ್ಷಗಳಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮೂರು ಸಾವಿರ ಆಸ್ತಿಗಳನ್ನೂ ಹರಾಜು ಹಾಕುವುದಕ್ಕೆ ಪಾಲಿಕೆ ಮುಂದಾಗಿದ್ದು, ಈ ಸಂಬಂಧ ಸಿದ್ಧತೆ ಶುರು ಮಾಡಿ ಕೊಳ್ಳುತ್ತಿರುವುದಾಗಿ ಬಿಬಿಎಂಪಿಯ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದ್ದಾರೆ.

ಕಬ್ಬನ್ ಉದ್ಯಾನ: ಖಾಸಗಿ ಆರ್ಟ್ ಗ್ಯಾಲರಿ ಬೇಡ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಖಾಸಗಿ ಆರ್ಟ್ ಗ್ಯಾಲರಿ ನಿರ್ಮಿಸಲು ಐದು ಎಕರೆ ಜಾಗವನ್ನು ಉದ್ಯಮಿಯೊಬ್ಬರಿಗೆ ಗುತ್ತಿಗೆ ಆಧಾರದಲ್ಲಿ ನೀಡುತ್ತಿರುವುದನ್ನು ಕಬ್ಬನ್ ಉದ್ಯಾನದ ವಾಯುವಿಹಾರಿಗಳು ವಿರೋಧಿಸಿದ್ದಾರೆ. ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಪೂರ್ವಭಾವಿ ನಡೆದಿತ್ತು. ಕಬ್ಬನ್ ಉದ್ಯಾನಕ್ಕೆ ಸಂಪರ್ಕ ಕಲ್ಪಿಸುವ ಕಸ್ತೂರ್ಬಾ ರಸ್ತೆಯ ಸೌಂದರ್ಯೀಕರಣ, ಕಬ್ಬನ್ ಉದ್ಯಾನದಲ್ಲಿ ಖಾಸಗಿ ಆರ್ಟ್ ಗ್ಯಾಲರಿ ನಿರ್ಮಾಣ ಮಾಡುವ ಕುರಿತು ಸಭೆಯಲ್ಲಿ ಚರ್ಚೆ ಆಗಿತ್ತು.

ಸಮಾಚಾರ ಸಣ್ಣದಲ್ಲ

ಪತ್ನಿಯನ್ನು ಕೊಂದ ಪತಿ ಪೊಲೀಸರಿಗೆ ಶರಣು

ತುಮಕೂರು: ಶೀಲಶಂಕಿಸಿ 8 ತಿಂಗಳ ಗರ್ಭಿಣಿಯನ್ನು 8 ವರ್ಷದ ಮಗನ ಕಣ್ಣೆದುರೇ ನೇಣು ಬಿಗಿದು ಕೊಲೆ ಮಾಡಿ ಬಳಿಕ ಪತಿ ಠಾಣೆಗೆ ಹೋಗಿ ಶರಣಾದ ಘಟನೆ ತಿಲಕ್ ಪಾರ್ಕ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಕೊಲೆಯಾದ ಗರ್ಭಿಣಿ ನಗ್ಮಾ, ಪತಿ ಸೈಯದ್ ಎಂದು ತಿಳಿದುಬಂದಿದೆ. ಒಂದು ವರ್ಷದ ಹಿಂದೆ ನಗ್ಮಾ ಮೊದಲ ಗಂಡನನ್ನು ಬಿಟ್ಟು ಸೈಯದ್‌ನನ್ನು ಪ್ರೀತಿಸಿ ಎರಡನೇ ಮದುವೆಯಾಗಿದ್ದಳು. ಆದರೆ ಪತ್ನಿಯ ಶೀಲ ಶಂಕಿಸಿ ಕಿರುಕುಳ ನೀಡುತ್ತಿದ್ದ. ಹಣಕ್ಕಾಗಿ ಪೀಡಿಸಿ ಹಲ್ಲೆ ನಡೆಸುತ್ತಿದ್ದ ಎನ್ನಲಾಗಿದೆ. ಇದೇ ವಿಚಾರಕ್ಕೆ ಗಲಾಟೆ ನಡೆದು ಪತ್ನಿ ಬಾಯಿಗೆ ಬಟ್ಟೆ ತುರುಕಿ ನೇಣು ಬಿಗಿದು ಕೊಲೆಗೈದು ನೇರವಾಗಿ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾನೆ.

ಸಚಿವರ ಹೇಳಿಕೆ: ಡಿಕೆಶಿ ವಿಚಲಿತ

ಉಡುಪಿ: ಕಾಂಗ್ರೆಸ್ ಪಕ್ಷದ ಗೊಂದಲ, ಮುಖ್ಯಮಂತ್ರಿ ಆಗಬೇಕು ಎಂಬ ಆಸೆ ಮತ್ತು ದಿನನಿತ್ಯ ಕೆ. ಎನ್. ರಾಜಣ್ಣ ಸೇರಿದಂತೆ ಅನೇಕ ಸಚಿವರು ಅವರ ವಿರುದ್ಧ ಹೇಳಿಕೆ ನೀಡುತ್ತಿರುವುದು ಡಿ.ಕೆ. ಶಿವಕುಮಾರ್ ಅವರನ್ನು ವಿಚಲಿತರನ್ನಾಗಿ ಮಾಡಿದೆ. ಹೀಗಾಗಿ ಅವರು ಹತಾಶರಾಗಿ ಈ ರೀತಿ ನಡೆದುಕೊಳ್ಳುತ್ತಿದ್ದಾರೆ. ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಡಿಸಿಎಂ ಡಿ.ಕೆ. ಶಿವಕುಮಾರ್ 16ನೇ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವ ಉದ್ಘಾಟನಾ ಸಮಾರಂಭದಲ್ಲಿ ನೀಡಿದ ನಟ್ -ಬೋಲ್ಟ್ ರಿಪೇರಿ ಮಾಡಿಸುತ್ತೇವೆ ಎಂಬ ಹೇಳಿಕೆ ಬಗ್ಗೆ ಕಾಪುವಿನಲ್ಲಿ ಪ್ರತಿಕ್ರಿಯಿಸಿದ ವಿಜಯೇಂದ್ರ, ಬೇರೆಯವರಿಗೆ ಹೇಳೋಕೆ ಆಗದೇ ಸಿನಿಮಾ ಉದ್ಯಮದವರ ಮೇಲೆ ಸಿಟ್ಟು ತೀರಿಸಿಕೊಳ್ಳುತ್ತಿದ್ದಾರೆ ಎಂದರು.

ಅರ್ಜುನ್ ಜನ್ಯ ಸಂಗೀತಕ್ಕೆ ಯುವಜನರಿಂದ ಭರ್ಜರಿ ಸ್ಪಂದನೆ | ಹತ್ತಾರು ಹಾಡುಗಳಿಂದ ಎಲ್ಲರ ಮನ ರಂಜಿಸಿದ ಜನ್ಯ ತಂಡ

ನಾಡಿನ ಕಲೆ-ಸಂಸ್ಕೃತಿ ಮೇಳೈಸಿದ ಹಂಪಿ ಉತ್ಸವಕ್ಕೆ ತೆರೆ

ಹಂಪಿ: ಹಂಪಿ ಉತ್ಸವದಲ್ಲಿ ತಡರಾತ್ರಿವರೆಗೂ ನಡೆದ ರಸಮಂಜರಿ ಕಾರ್ಯಕ್ರಮದಲ್ಲಿ ನೆರೆದಿದ್ದ ಜನರು ಹುಚ್ಚೆದ್ದು ಕುಣಿದರು.

ಖ್ಯಾತ ಸಂಗೀತ ನಿರ್ದೇಶಕ ಅರ್ಜುನ ಜನ್ಯ ಅವ ರನ್ನು ಕಂಡು ಕೇಕೆ, ಶಿಳ್ಳೆಗಳಿಂದ ಸ್ವಾಗತಿಸಿತು. ಶನಿ ವಾರ ಮಧ್ಯರಾತ್ರಿ ಹಂಪಿ ಉತ್ಸವಕ್ಕೆ ಈ ರೀತಿಯಲ್ಲಿ 'ಎ.ಜೆ' ಸಂಗೀತ ತಂಡ ಭರ್ಜರಿ ಪ್ರವೇಶ ನೀಡಿತು. ಜನ್ಯ ಕೀಬೋರ್ಡ್ ನುಡಿಸುತ್ತಲೇ ಇದ್ದಾಗ ಹತ್ತು ನಿಮಿಷ ವಿವಿಧ ಗೀತೆಗಳನ್ನು ಹಾಡುತ್ತಾ ಬಂದ ಹಲವು ಹೊಸ ಗಾಯಕರು, ನುರಿತ ವಾದಕರ ತಂಡವನ್ನು ಸ್ವಾಗತಿ ಸಲಾಯಿತು. ಇದೊಂದು ಹೊಸ ಅನುಭವವಾಗಿತ್ತು.

ಹುಚ್ಚೆದ್ದು ಕುಣಿದ ಯುವಜನತೆ: 'ನೀ ಸಿಗೋ ವರೆಗೂ, ನಗೋ ವರೆಗೂ ಕಾದಿರುವೆ ಗೆಳತಿಯೇ' ಎಂದು ಯುಗಳ ಗೀತೆ ಶುರು ಮಾಡಿದಾಗ ಯುವಕರು, ಯುವತಿಯರು ಹುಚ್ಚೆದ್ದು ಕುಣಿದರು. ಜೈಜೈಜೈ ಪ್ರೇಕ್ಷಕರ ಎದೆಬಡಿತ ಹೆಚ್ಚಿಸಿದರು. ಹಿಂದೆ ಭಜರಂಗಿ ಹಾಡುತ್ತಾ ಡ್ರಮ್ಸ್ ಬಡಿದು ಗದೆ ಹಿಡಿದು ಹೆಜ್ಜೆ ಹಾಕಿದ ನೃತ್ಯಗಾರರು ಮೆರುಗು ನೀಡಿದರು.

ಹಂಪಿ ಉತ್ಸವದ ಪ್ರಧಾನ ವೇದಿಕೆಯಲ್ಲಿ ಗಾಯಕ ಅರ್ಜುನ ಜನ್ಯ ಅವರಿಂದ ಶನಿವಾರ ತಡರಾತ್ರಿವರೆಗೆ ನಡೆದ ಗಾಯನಕ್ಕೆ ನೆರೆದಿದ್ದ ಜನರು ಹುಚ್ಚೆದ್ದು ಕುಣಿದರು.

ವೈಭವದ ತೆರೆ

ನಾಡಿನ ಕಲೆ-ಸಂಸ್ಕೃತಿಗಳನ್ನು ಅನಾವರಣಗೊಳಿ ಸಿದ ಹಂಪಿ ಉತ್ಸವಕ್ಕೆ ಭಾನುವಾರ ತೆರೆಬಿದ್ದಿದೆ. ದೇಶ-ವಿದೇಶಗಳ ಅಪಾರ ಸಂಖ್ಯೆಯ ಪ್ರವಾಸಿಗರು ಪಾಲ್ಗೊಂಡು ವಿಜಯ ನಗರ ಸಾಮ್ರಾಜ್ಯದ ಶ್ರೀಮಂತ ಕಲೆಗಳಿಗೆ ಮಾರುಹೋದರು.

'ಹೇ ಹುಡುಗಿ ಯಾಕಿಂಗ್ ಮಾಡ್ತಿ, ವರ್ಷಾಯ್ತು ಸಿಗುಲ್ಲ ಕೈಗೆ' ಗೀತೆಯಲ್ಲಿ ಮೋಡಿ ಮಾಡಿದ ಜನ್ಯ ಅವರು ಎಲ್ಲರೂ ಎದ್ದುನಿಂತ ಕುಣಿಯುವಂತೆ ಮಾಡಿಬಿಟ್ಟರು. ಮಾಸ್ಟರ್ ಆನಂದ ರಚಿಸಿದ 'ನನ್ನಲ್ಲೊಂದು, ನಿನ್ನಲ್ಲೊಂದು, ಏನೊಂದು ಗುಟ್ಟು ಇದೆ' ಸಾಹಿತ್ಯವನ್ನು ಓದಿ ಹೇಳಿದರು, ಅದಕ್ಕೆ ಸ್ಥಳದಲ್ಲೇ ಜನ್ಯ ಅವರು ರಾಗ ಸಂಯೋಜಿಸಿದ ತಂಡದೊಟ್ಟಿಗೆ ಹಾಡಿಸಿದ್ದಕ್ಕೆ ಸಭಿಕರು ಹುಬ್ಬೇರಿಸಿದರು. 'ಬಾನ ದಾರಿಯಲ್ಲಿ ಸೂರ್ಯ ಜಾರಿ ಹೋದ' 'ಬೊಂಬೆ ಹೇಳತೈತೆ' ಗೀತೆಗಳ ಮೂಲಕ ನಟ ಪುನೀತ್ ಅವರನ್ನು ಸ್ಮರಿಸುವುದನ್ನು ಮರೆಯಲಿಲ್ಲ.

'ಯಾಕೋ ಹುಡುಗ ಮೈಯಾಗ ಹೆಂಗೈತಿ' ಗೀತೆಗೆ ಪ್ರೇಕ್ಷಕರು ಕೋರಸ್ ಹಾಡಿದರು. ಜಸ್ಕರಣ್ ಅವರ ಕಂಠಸಿರಿಯಲ್ಲಿ ಹೊರಹೊಮ್ಮಿದ 'ಜೀವದ ಗೆಳತಿಯೇ' ಹಾಡು ಚಳಿ ಮರೆಸಿತು. ಸರಿಗಮಪ ಖ್ಯಾತಿಯ ಕೀರ್ತನ್ ಹೊಳ್ಳ, ಗಾಯಕ ಸುನೀಲ್ ಸೇರಿದಂತೆ ಹಲವು ಗಾಯಕರು ಹಂಪಿ ಉತ್ಸವ ಮುಖ್ಯ ವೇದಿಕೆಯಲ್ಲಿ ತಮ್ಮ ಪ್ರತಿಭೆ ಪ್ರಸ್ತುತ ಪಡಿಸಿದರು.

ಬೀಟ್ ಗುರು ತಂಡದ ಚರ್ಮವಾದ್ಯದ ಹೊನಲು: ಬೀಟ್ ಗುರು ತಂಡ ಚರ್ಮವಾದ್ಯಗಳನ್ನು ನುಡಿಸಲು ಆರಂಭಿಸಿದಾಗ ರಾತ್ರಿ 12 ಗಂಟೆ ಆಗಿತ್ತು. ವೇದಿಕೆ ಯಲ್ಲಿ ಕೊಳಲು, ಚರ್ಮವಾದ್ಯಗಳ ಸದ್ದು ಕೇಳಿಬರು ತ್ತಲೇ ಪ್ರೇಕ್ಷಕರು ಎದೆಬಡಿತ ನಿಧಾನವಾಗಿ ಹೆಚ್ಚಾಯಿತು. ತಂಡದ ನಾಯಕ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಹಾಡಿಗೆ ಕೊಳಲು, ವಾದ್ಯಗಳ ವಾದನ ಚಪ್ಪಾಳೆಯ ಹರ್ಷೋದ್ಘಾರಕ್ಕೆ ಸಾಕ್ಷಿಯಾಯಿತು.

ನಟಿ ನಿಖಿತಾ ಸ್ವಾಮಿ, ರಮೇಶ್ ಅವರ ತಂಡ, 'ಬಾಳ ಬಂಗಾರ ನೀನು, ಹಣೆಯ ಸಿಂಗಾರ ನೀನು' ಹಾಡಿಗೆ ಮನಮೋಹಕ ನೃತ್ಯ, ಶರಣ್ಯ ಶೆಟ್ಟಿ ತಂಡದ ನೃತ್ಯಗಳು ಮಧ್ಯರಾತ್ರಿಯ ಚಳಿ ಮರೆಸಿತು. ಕಾರ್ಯಕ್ರಮ ಕೊನೆಗೊಳ್ಳುವಾಗ ಮಧ್ಯರಾತ್ರಿ 2 ಗಂಟೆಯಾಗಿತ್ತು. ಆಗಲೂ ಜನಸಾಗರ ಕದಲದೆ ಉಳಿದಿತ್ತು.

ಇಂದಿನಿಂದ ಬಜೆಟ್ ಅಧಿವೇಶನ ಆರಂಭ

← ಮೊದಲಪುಟದಿಂದ

ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಯಾಗಿಲ್ಲ. ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಕೊರತೆ, ಗ್ಯಾರಂಟಿ ಯೋಜನೆಗಳ ಹಣ ಬಿಡು ಗಡೆ ವಿಳಂಬ, ಮೆಟ್ರೊ, ಬಸ್, ಹಾಲಿನ ದರ ಏರಿಕೆ, ಕೆಪಿಎಸ್ಸಿ ಹಗರಣ, ವಿಶ್ವವಿದ್ಯಾಲಯಗಳ ಮುಚ್ಚುವ ತೀರ್ಮಾನ, ಪರಿಶಿಷ್ಟ ಜಾತಿ ಪಂಗಡಗಳಿಗೆ ಮೀಸಲಾದ ಅನುದಾನ, ಬೇರೆ ಉದ್ದೇಶಗಳಿಗೆ ಬಳಕೆ ಮುಂತಾದ ವಿಚಾರಗಳನ್ನು ಇಟ್ಟುಕೊಂಡು ಪ್ರತಿಪಕ್ಷಗಳು ಸರಕಾರದ ಮೇಲೆ ಮುಗಿ ಬೀಳಲು ಸಿದ್ಧವಾಗಿವೆ. ಆದರೆ ಸದನದಲ್ಲಿ ಪ್ರತಿಪಕ್ಷಗಳ ಅಸ್ತ್ರಗಳನ್ನು ಸಮರ್ಥವಾಗಿ ಎದುರಿ ಸಲು ಕಾಂಗ್ರೆಸ್ ಸಹ ಪ್ರತ್ಯಾಸ್ತ್ರಗಳನ್ನು ಸಿದ್ಧ ಮಾಡಿಕೊಂಡಿದ್ದು, ತೆರಿಗೆ ಅನುದಾನ ಹಂಚಿಕೆ ಯಲ್ಲಿ ಕೇಂದ್ರದಿಂದ ಆಗಿರುವ ಅನ್ಯಾಯ, ಮಹಾದಾಯಿ, ಕೃಷ್ಣ, ಮೇಕೆದಾಟು, ನೀರಾವರಿ ಯೋಜನೆಗಳಿಗೆ ಸ್ಪಂದಿಸದ ಕೇಂದ್ರದ ನಡೆ, ಕೋವಿಡ್ ಕುರಿತ ನ್ಯಾಯಮೂರ್ತಿ ಮೈಕೆಲ್ ಡಿ'ಕುನ್ಹಾ ಸಮಿತಿಯ ವರದಿ, ಕೇಂದ್ರ ಸಚಿವ ಎಚ್ಡಿಕೆ ವಿರುದ್ಧದ ಹಗರಣಗಳನ್ನು ಪ್ರಸ್ತಾಪಿಸಿ ಪ್ರತಿಪಕ್ಷಗಳತ್ತ ಬಾಣ ಬಿಡಲು ಕಾಂಗ್ರೆಸ್ ತನ್ನದೇ ಆದ ತಯಾರಿ ನಡೆಸಿದೆ ಎಂದು ತಿಳಿದುಬಂದಿದೆ.

> ಕಾಂಗ್ರೆಸ್ ಸರಕಾರ ರಾಜ್ಯಪಾಲರಿಗೆ ನಿರಂತರವಾಗಿ ಅಪಮಾನ ಮಾಡು ತ್ತಿದೆ. ಮತ್ತೊಂದು ಕಡೆ ಭಾಷಣಗಳಲ್ಲಿ ಅವರಿಂದಲೇ ಸರಕಾರಕ್ಕೆ ಮೆಚ್ಚುಗೆ ಹೇಳುವ ಮಾತನ್ನು ಆಡಿಸಲಾಗುತ್ತಿದೆ. ಇದನ್ನು ವಿರೋಧಿಸಿ ಮಾರ್ಚ್ 3 ರಂದು ಬಿಜೆಪಿ ಪ್ರತಿಭಟಿಸಲಿದೆ.
> -**ಆರ್. ಅಶೋಕ್**, ಪ್ರತಿಪಕ್ಷ ನಾಯಕ

ಉಕ್ಕು ಕಾರ್ಖಾನೆ ಸ್ಥಾಪನೆ ಪ್ರಸ್ತಾವ ಕೇಂದ್ರದ ಮುಂದಿಲ್ಲ

ಕೇಂದ್ರ ಉಕ್ಕು-ಬೃಹತ್ ಕೈಗಾರಿಕೆ ಸಚಿವ ಕುಮಾರಸ್ವಾಮಿ ಸ್ಪಷ್ಟನೆ

ಬಲ್ದೋಟ ಕಾರ್ಖಾನೆ ವಿಸ್ತರಣೆಗೆ ವಿರೋಧ

ಕೊಪ್ಪಳ: ಬಲ್ದೋಟ ಸಂಸ್ಥೆಯ ಉದ್ದೇಶಿತ ಉಕ್ಕು ಕಾರ್ಖಾನೆ ಸ್ಥಾಪನೆಯ ಪ್ರಸ್ತಾವನೆ ಕೇಂದ್ರ ಸರಕಾರದ ಮುಂದೆ ಬಂದಿಲ್ಲ. ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುವ ಕೈಗಾರಿಕೆ ಸ್ಥಾಪಿಸುವುದು ಸರಿಯಲ್ಲ ಎಂದು ಈಗಾಗಲೇ ರಾಜ್ಯ ಸರಕಾರಕ್ಕೆ ಸಲಹೆ ನೀಡಿದ್ದೇನೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್. ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಕೊಪ್ಪಳ ಜಿಲ್ಲಾ ಕ್ರೀಡಾಂಗಣದ ಹೆಲಿಪ್ಯಾಡ್ ನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಲ್ದೋಟ ಸಮೂಹ ಸಂಸ್ಥೆ ಉಕ್ಕು ಕಾರ್ಖಾನೆ ಸ್ಥಾಪನೆಗೆ ವಿರೋಧ ವ್ಯಕ್ತವಾಗಿರುವ ಮಾಹಿತಿ ಇದೆ. ಇದಕ್ಕೆ ಕೊಪ್ಪಳ ಗವಿಮಠದ ಶ್ರೀಗವಿಸಿದ್ದೇಶ್ವರ ಸ್ವಾಮೀಜಿಗಳು ಕೂಡ ವಿರೋಧ ವ್ಯಕ್ತಪಡಿಸಿದ್ದು ಗೊತ್ತಿದೆ. ಕೊಪ್ಪಳದಲ್ಲಿ ಕಾರ್ಖಾನೆ ಸ್ಥಾಪನೆ ಕುರಿತಂತೆ ರಾಜ್ಯ ಸರಕಾರ ಹಾಗೂ ಕಂಪನಿ ಒಪ್ಪಂದ ಮಾಡಿಕೊಂಡಿವೆ. ಈ ಕಾರ್ಖಾನೆ ಮತ್ತು ಕೇಂದ್ರ ಸರಕಾರಕ್ಕೆ ಸಂಬಂಧವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಸರಕಾರಕ್ಕೆ ಸೂಚನೆ: ಪರಿಸರ ಹಾಗೂ ಜನರಿಗೆ ಹಾನಿ ಉಂಟು ಮಾಡುವ ಕೈಗಾರಿಕೆ ಸ್ಥಾಪಿಸುವುದು ಸರಿಯ ಎಂಬುದು ರಾಜ್ಯ ಸರಕಾರ ತಿಳಿದುಕೊಳ್ಳಬೇಕಿದೆ. ಉಕ್ಕು ಕೈಗಾರಿಕೆ ವಿರೋಧಿಸುವ ಕೊಪ್ಪಳ ಜನರ ಬೇಡಿಕೆಗೆ ಜೆಡಿಎಸ್ ಸಹಮತವೂ ಇದೆ. ರಾಜ್ಯ ಸರಕಾರ ಕೊಪ್ಪಳದ ಜನ ಹಾಗೂ ಸ್ವಾಮೀಜಿಗಳ ಜೊತೆ ಸಭೆ ನಡೆಸಿ ಮುಂದುವರಿಯಬೇಕು ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

ಕೊಪ್ಪಳ ಜಿಲ್ಲಾ ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಭಾನುವಾರ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಸುದ್ದಿಗಾರರೊಂದಿಗೆ ಮಾತನಾಡಿದರು.

2 ವರ್ಷ ವ್ಯರ್ಥವಾಗಿ ಕಳೆದ ಸರಕಾರ

ಬರೀ ಗ್ಯಾರಂಟಿ ಯೋಜನೆ ಬಗ್ಗೆ ಮಾತನಾಡುವುದು ಹಾಗೂ ಕೇಂದ್ರ ಸರಕಾರ ಟೀಕಿಸುತ್ತಲೇ ರಾಜ್ಯ ಸರಕಾರ 2 ವರ್ಷ ಕಳೆದಿದೆ. ಈ ಸರ್ಕಾರದಿಂದ ಹೆಚ್ಚಿನ ನಿರೀಕ್ಷೆ ಇಲ್ಲ. ರಾಜ್ಯ ಸರಕಾರದ ಬೊಕ್ಕಸದಲ್ಲಿ ಹಣ ಇದೆ. ಆದರೆ, ವ್ಯಾಪಕ ದುರ್ಬಳಕೆಯಿಂದ ಅಭಿವೃದ್ಧಿ ಕೆಲಸಕ್ಕೆ ಅನುದಾನವೇ ಇಲ್ಲದಾಗಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ 5 ಸಾವಿರ ಕೋಟಿ ರೂ. ಮೀಸಲಿಡಲಾಗಿತ್ತು. ಅದರಲ್ಲಿ ಒಂದು ನಯಾ ಪೈಸ ಕೂಡ ಬಿಡುಗಡೆ ಆಗಿಲ್ಲ. ಕಾಂಗ್ರೆಸ್ ಸರಕಾರ ಗುತ್ತಿಗೆದಾರರಿಂದ ಭಾರಿ ಪ್ರಮಾಣದ ಕಮಿಷನ್ ವಸೂಲಿ ಮಾಡುತ್ತಿದೆ ಎಂದು ಕೇಂದ್ರ ಸಚಿವರು ಆರೋಪಿಸಿದರು.

ಕರ್ನಾಟಕ ಸರ್ಕಾರ
ಜಿಲ್ಲಾ ಎನ್.ಸಿ.ಡಿ ಕೋಶ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ.ಸಂಖ್ಯೆ:- 08194-200388, E-mail:ncdcta2019@gmail.com
ಸಂ. ಎನ್.ಸಿ.ಡಿ.ಚಿ/107/2024-25 ದಿನಾಂಕ: 01.03.2025
ಟೆಂಡರ್ ಪ್ರಕಟಣೆ
